ಏನು ಹೇಳಿದ್ದಾರೆ ಆದನ್ನು ಕೂಡ ರೆವ್ಯೂ ಮಾಡಿ ಸರ್ಕಾರದಿಂದ ಬಿ.ಡಿ.ಎ.ಗೆ ಡೈರೆಕ್ಷನ್ ಹೋಗಿತ್ತು, ಅಲ್ಲಿಂದ ಮತ್ತೆ ರೆವ್ಯೂ ಮಾಡಬೇಕೆಂದು ಮತ್ತೆ ಸರ್ಕಾರಕ್ಕೆ ಬರೆಯ ಬೇಕೆಂದು. ಈ ಕುರಿತು ಸಂಪೂರ್ಣ ವರದಿಯನ್ನು ತಂದು....

ಅಧ್ಯಕ್ಷರು :- ನಾನು ಸರ್ಕಾರಕ್ಕೆ ಇಷ್ಟೇ ಹೇಳುವುದಕ್ಕೆ ಇಚ್ಛಪಡುತ್ತೇನೆ. ಸಿವಿಲ್ ಸರ್ವೀಸ್‌ನಲ್ಲಿ ಈ ಪದ್ಧತಿ ಬಂದದ್ದು ನಮಗೆ ಬ್ರಿಟೀಷರಿಂದ ಬಂದಂಥ ಕೊಡುಗೆ. ಆ ಕಾಲಕ್ಕೆ ಅವರು ಇಲ್ಲಿದ್ದು ಆಡಳಿತ ನಡೆಸತಕ್ಕ ಕಾಲದಲ್ಲಿ ಒಂದು ವೇಳೆ ಯಾರಿಗಾದರೂ ಸಸ್ಪೆಂಡ್ ಮಾಡಿದ್ದಾರೆಂದು ವರ್ತಮಾನ ಬಂದರೂ ಕೂಡ ಅವರು ಎಲ್ಲಿಯೂ ಕಾಣಿಸಿಕೊಳ್ಳುತ್ತಿರಲಿಲ್ಲ, ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಸಾಮಾಜಿಕವಾಗಿ ಎಲ್ಲಿಯೂ ಮುಖ ತೋರಿಸುವುದಕ್ಕಾಗುವುದಿಲ್ಲವೆಂದು ಮಾಡುತ್ತಿದ್ದರು. ಈಗ ಸಸ್ಪೆನ್ಷನ್‌ನಲ್ಲಿದ್ದರೆ ಸಬ್‌ಸಿಸ್ಟೆನ್ಸ್ ಬರುತ್ತದೆಂದು ಲೆಕ್ಕ ಹಾಕಿ ಮತ್ತೆ ಬೇರೆ ಕೇಸ್ ಕವರ್ ಅಪ್ ಮಾಡುಕೊಳ್ಳವುದಕ್ಕೆ ಓಡಾಡುತ್ತಾರೆ. Suspension is not a punishment in these days. It fecilitates the convenience of the accused to further indulge in attempts to extricate themselves from the crisis to which they would have landed. Therefore, please examine this aspect from this angle, they should be treated as criminals, not civil servants. Please come back with detailed information on all these mattters. Take some more time.

SRI. ANANTHNAG :- I will come back will all the information.

MR. SPEAKER :- Now, Dr. Malaka Reddy to continue his speech.

ಶ್ರೀ ರಮಾನಾಥ್ ರೈ :- ನಿನ್ನೆ ತಡೆಹಿಡಿದ ಪ್ರಶ್ನೆ ಶ್ರೀ ಟಿ. ಬಿ. ಜಯಚಂದ್ರ ಮತ್ತು ಶ್ರೀ ನಾರಾಯಣ ಅವರದ್ದು ಇವತ್ತು ಬಂತು. ಆದರೆ ನನ್ನದ್ದು ಬರಲಿಲ್ಲ.

ಅಧ್ಯಕ್ಷರು :- ನಾನು ನಾಳೆಗೆ ಹಾಕಿಸಿಕೊಡುತ್ತೇನೆ.

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

5. ವಿತ್ತೀಯ ಕಾರ್ಯ ಕಲಾಪ

ವಿಷಯ :– 1996-97 ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದುವರಿದಿದ್ದು)

+ **ಡಾ : ಎ. ಬಿ. ಮಲಕರೆಡ್ಡಿ (ಯಾದಗಿರ್)** :- ಮಾನ್ಯ ಉಪಾಧ್ಯಕ್ಷರೇ,

ನಿನ್ನೆ ಆರೋಗ್ಯ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಮಾತನಾಡುತ್ತಿದ್ದೆ. ಇವತ್ತು ಕೂಡ ಆ ಮಾತುಗಳನ್ನು ಮುಂದುವರಿಸ ಬೇಕೆಂದು ತಾವು ಅಪ್ಪಣೆ ಕೊಟ್ಟಿದ್ದೀರಿ. ಅದಕ್ಕೆ ತಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ವೈದ್ಯಕೀಯ ಶಿಕ್ಷಣ ಇಲಾಖೆಯ ಬಗ್ಗೆ ಪ್ರಥಮದಲ್ಲಿ ಅಲ್ಲಿನ ವಿದ್ಯಾರ್ಥಿಗಳ ಪ್ರವೇಶದ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ವೈದ್ಯಕೀಯ ಕಾಲೇಜುಗಳಲ್ಲಿ ನಡೆಯತಕ್ಕ ಪ್ರವೇಶದ ಬಗ್ಗೆ ಮೊದಲನೆಯದಾಗಿ ನನ್ನ ಮಿತ್ರರಾದ ಡಾ : ಶಂಕರ್‌ನಾಯ ಕರ್ ರವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಅವರು ಕೂಡ ವೈದ್ಯರಿದ್ದಾರೆ, ಹೊಸದಾಗಿ ಈ ಖಾತೆಯನ್ನು ವಹಿಸಿಕೊಂಡಿದ್ದಾರೆ. ಅವರು ಕೂಡ ವಿಷಯ ಸಮಿ ತಿಯಲ್ಲಿ ಕೆಲಸ ಮಾಡಿದ್ದಾರೆ; ಅವರಲ್ಲಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ಬಂದಮೇಲೆ ಒಂದು ಬಹಳ ಸರಳವಾದ ಕೆಲಸವನ್ನು ಅವರು ಮೊದಲು ಮಾಡಬೇಕು. ಅದೊಂದು ಕೆಲಸವನ್ನು ಸರಿಯಾಗಿ ಮಾಡಿದರೆ ಎಲ್ಲಕ್ಕಿಂತ ಹೆಚ್ಚು ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ಇಂಡಿಯನ್ ಮೆಡಿಕಲ್ ಕೌನ್ಸಿಲ್ ಏನು 30 ನೇ ಆಗಸ್ಟ್‌ಗೆ ಅಡ್ಮಿಷನ್ಸ್ ಮುಗಿಯಬೇಕೆಂದು ನಿಗದಿ ಮಾಡಿದೆ ಅದೊಂದು ಕೆಲಸವನ್ನು ತಾವು ಮಾಡಬೇಕು. ಈ ಬಗ್ಗೆ ನಾನು ರಾಜಕೀಯ ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿಲ್ಲ. ನನಗೆ ತಿಳಿಸಿದ ಮಟ್ಟಿಗೆ, ನಾನು ಕೂಡ ವೈದ್ಯಕೀಯ ಸಂಸ್ಥೆಯ ಅಧ್ಯಕ್ಷನಾಗಿದ್ದೇನೆ ; 1982 ರಲ್ಲಿ ಕರಾರುವಾಕ್ಕಾಗಿ ಆಗಸ್ಟ್ 30 ಕ್ಕೆ ಅಡ್ಮಿಷನ್ಸ್ ಮುಗಿ ಯುತ್ತಿತ್ತು, ಪೋಸ್ಟ್ ಗ್ರಾಜುಯೇಟ್ ಅಡ್ಮಿಷನ್ಸ್ ಸೆಪ್ಟೆಂಬರ್ 30 ಕ್ಕೆ ಮುಗಿಯುತ್ತಿತ್ತು. 1983 ರಿಂದ 1996 ರವರೆಗೆ ಅವ್ಯಾಹತವಾಗಿ ಒಂದು ವರ್ಷ ಕೂಡ ಬಿಡದೆ ವರ್ಷಪೂರ್ತಿ ಅಡ್ಮಿಮಿಷನ್ಸ್ ನಡೆಯುತ್ತಿದೆ, ಅದನ್ನು ನಾನು ನಿನ್ನೆ ಹೇಳುತ್ತಿದ್ದೆ. ಒಂದು ಪ್ರೈಮರಿ ಸ್ಕೂಲ್ ಅಡ್ಮಿಮಿಷನ್‌ಗೆ ಏನು ಸ್ಯಾಂಕ್ಟಿಟಿ ಇದೆ ಅದು ಮೆಡಿಕಲ್ ಕಾಲೇಜ್ ಅಡ್ಮಿಷನ್ಸ್‌ನಲ್ಲಿ ಇಲ್ಲ. ಏತಕ್ಕೆ ಹೀಗಾಗುತ್ತಿದೆ ಎಂದು ತಾವು ಯೋಚನೆ ಮಾಡಬೇಕು. ತಾವು ಹೊಸದಾಗಿ ಖಾತೆ ವಹಿಸಿಕೊಂಡಿದ್ದೀರಿ. ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ಕೆಲಸ ಏನಾಗಿದೆ ಎಂದರೆ ಏನೆಲ್ಲ ಅಡ್ಮಿಷನ್ಸ್‌ನಲ್ಲಿ ಅವ್ಯವಹಾರವಾಗುತ್ತದೆ ಅದನ್ನು ಸರಿಪಡಿಸುವುದೇ ಮುಖ್ಯ ಕೆಲಸವಾಗಿದೆಯೇ ಹೊರತು, ಅದು ಬಿಟ್ಟು ಇನ್ನೊಂದು ಕೆಲಸ ಆಗಿಲ್ಲ. ಅದಕ್ಕಾಗಿ ತಾವು ದಯಮಾಡಿ ಒಂದು ಕೆಲಸ ಮಾಡ ಬೇಕು. ಈಗ ಯಾವುದೂ ಗೊಂದಲ ಇಲ್ಲ. ಸುಮಾರು 2-3 ವರ್ಷಗಳಿಂದ ಸುಪ್ರೀಂ ಕೋರ್ಟ್ ಆದೇಶದಿಂದ ಗೊಂದಲ ಆಯಿತು. ಸುಪ್ರೀಂ ಕೋರ್ಟ್ ಆ ರೀತಿ ಆದೇಶ ಏತಕ್ಕೆ ಮಾಡಿತು ಎಂದು ನಾವೆಲ್ಲ ಈ ಸಭೆಯಲ್ಲಿ ವಿಚಾರ ಮಾಡಬೇಕು ಸುಪ್ರೀಂ ಕೋರ್ಟ್ ತಮಗೆ ಗೊತ್ತಿದ್ದಂತೆ it has passed an executive order ; it is not just upholding the rules and regulations and laws. The Supreme Court was constrained to pass an executive order they have gone to the extent of constituting the selection Committee they have gone to the extent of even fixing the fee/tariff. ಏತಕ್ಕೆ ಹೀಗೆ ಮಾಡಿದಿರಿ? ಅದಕ್ಕಿಂತ ಮೊದಲು ಸುಮಾರು 7-8 ವರ್ಷಗಳಿಂದ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟರೂ ಕೂಡ ಯಾವ ಸಂಘ ಸಂಸ್ಥೆಗಳು ಅದಕ್ಕೆ ಮನ್ನಣೆ ಕೊಡಲಿಲ್ಲ. ಅದಕ್ಕೆ ಬೇಜಾರಾಗಿ,

ಸುಪ್ರೀಂ ಕೋರ್ಟ್ ಜಡ್ಜಸ್ ನಾಗರೀಕರು. ಅವರಿಗೂ ಮಕ್ಕಳು ಇರುತ್ತಾರೆ, ಸಂಬಂಧಿಕರು ಇರುತ್ತಾರೆ. ಅವರ ಮಕ್ಕಳು ಕೂಡ ಅರ್ಜಿ ಹಾಕಿರುತ್ತಾರೆ. ಅವರಿಗೆ ಅಷ್ಟಿಷ್ಟು ವಿಷಯ ಗೊತ್ತಾಗುತ್ತದೆ. ಆದಕ್ಕೆ ಬೇಜಾರಾಗಿ ಅದನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳಬೇಕೆಂದು ಅವರು ಒಂದು ರೂಲ್ಸ್ ಫ್ರೇಂ ಮಾಡಿದರು; ಆಜ್ಞೆ ಜಾರಿ ಮಾಡಿದರು. ಅದರಿಂದ ಇವತ್ತು ಏನು ಅನಾಹುತ ಆಗಿದೆ ಎಂದರೆ ನಿಮ್ಮ ಅನೈತಿಕ ವರ್ತನೆ ಬಯಲಾಗಿದೆ. ಹಿಂದೆ ಇದ್ದುದನ್ನು ನೆನಪಿಡಿ. 1983 ರಿಂದ ಇಲ್ಲಿಯವರೆಗೆ ನಡೆದಿದೆ. ಅದಕ್ಕೆ ಮೊದಲು ಈ ರೀತಿ ಆಗಿರಲಿಲ್ಲ. ರಾಜಕೀಯವಾಗಿ ನೀವೇ ಆಲೋಚನೆ ಮಾಡಿಕೊಳ್ಳಿ. We will abolish the capitation fee ; we will abolish the capitation system, ಎಂದು ನಿಮ್ಮ ಮ್ಯಾನಿಫೆಸ್ಟೋದಲ್ಲಿ ಹೇಳಿದ್ದೀರಿ. ಆದರೆ ಮಾಡಿದ್ದೀರೋ? To add insult to injury within the first year of your rule you started permitting 2 more private medical colleges. ಮತ್ತು ನೀವು ಏನು ಮಾಡಿದಿರಿ? ಮೊದಲನೆಯ ವರ್ಷ 2-3 ತಿಂಗಳುಗಳಲ್ಲಿ ರಾಜ್ ಕಮಿಷನ್ ಎಂದು ಅಪಾಯಿಂಟ್ ಮಾಡಿದಿರಿ. ಆ ರಿಪೋರ್ಟ್ ಕೂಡ ತಮ್ಮ ಮುಂದಿದೆ. ರಾಜ್ ಕಮಿಟಿ ಅಪಾಯಿಂಟ್ ಮಾಡಿದಿರಿ, ಅವರು ವರದಿ ಕೊಟ್ಟರು. ಅವರ ಟರ್ಮ್ಸ್ ಅಂಡ್ ಕಂಡೀಷನ್‌ನಲ್ಲಿ ಕ್ಯಾಪಿಟೇಷನ್ ಸಿಸ್ಟಂ ಅಬಾಲಿಷ್ ಮಾಡಬೇಕೆಂದು ಇತ್ತು; ಅವರು ಒಂದು ಫಾರ್ಮಲ ಹಾಕಿಕೊಟ್ಟರು. 5 ವರ್ಷದವರೆಗೆ ಕ್ಯಾಪಿಟೇಷನ್‌ಗೆ ಪರ್ಮಿಷನ್ ಕೊಟ್ಟರು. ಈ 5 ವರ್ಷಗಳ ಅವಧಿಯಲ್ಲಿ ಪ್ರೈವೇಟ್ ಕಾಲೇಜಿನ ಯಾವುಯಾವುದು ಇದೆ ಅವರಿಂದ ಸಾಕಷ್ಟು ವಂತಿಗೆ ತೆಗೆದುಕೊಂಡು, ಹಣ ಶೇಖರಣೆ ಮಾಡಿ ಅದರ ಜೊತೆಗೆ ಸಾರ್ವಜನಿಕ ದೇಣಿಗೆಗಳಿಂದ, ದಾನಿಗಳಿಂದ ಹಣ ಸಂಗ್ರಹಿಸಿ ಮುಂದೆ ಕಾಲೇಜುಗಳನ್ನು ನಡೆಸಬೇಕು 5 ವರ್ಷ ಆದ ಮೇಲೆ ವಂತಿಗೆ, ಕ್ಯಾಪಿಟೇಷನ್ ಶುಲ್ಕ ಸಂಪೂರ್ಣ ಸ್ಟಾಪ್ ಮಾಡಬೇಕೆಂದು ನೀವೇ ಅಪಾಯಿಂಟ್ ಮಾಡಿದ ರಾಜ್ ಕಮಿಟಿ ರಿಪೋರ್ಟ್ ಕೊಟ್ಟಿತ್ತು; ಸರ್ಕಾರ ಅದನ್ನು ಸ್ವೀಕಾರ ಮಾಡಿತ್ತು. ಐದು ವರ್ಷ ಆದಮೇಲೆ ಏನೂ ಇಲ್ಲ.

12. 40 ಪಿ. ಎಂ.

ಅದಕ್ಕಾಗಿ ಸುಪ್ರೀಂ ಕೋರ್ಟ್ ಈ ರೀತಿ ಆಜ್ಞೆ ಹೊರಡಿಸಿತು. ಅದರ ಪರಿಣಾಮ ಕರ್ನಾಟಕದ ಮಕ್ಕಳಿಗೆ ಕಂಟಕ ಬಂದಿದೆ. ಎಷ್ಟು ಪ್ರಮಾಣದ ಮೆಡಿಕಲ್ ಸೀಟುಗಳು ವೃತ್ತಿಪರ ಕಾಲೇಜುಗಳಿಂದ ಸಿಗಬೇಕಾಗಿತ್ತೋ ಅಷ್ಟು ಸಿಗುತ್ತಿಲ್ಲ ನಮಗೆ. ಇದಕ್ಕೆ ಹೊಣೆಗಾರರು ಯಾರು? ಆದ್ದರಿಂದ ದಯವಿಟ್ಟು ವಿದ್ಯಾಕ್ಷೇತ್ರದಲ್ಲಿ ಪಾವಿತ್ರ್ಯತೆಯನ್ನು ಕಾಪಾಡಿಕೊಳ್ಳಬೇಕು. ನಾವೂ ಸಾರ್ವಜನಿಕ ರಂಗದಲ್ಲಿ ಕೆಲಸ ಮಾಡುತ್ತಿದ್ದೇವೆ. ನಮಗೂ ಕೂಡ ಅನೇಕ ಅಬ್ಲಿಗೇಷನ್ಸ್ ಇರುತ್ತವೆ. ಪ್ರೈವೇಟ್ ಕಾಲೇಜ್‌ನಲ್ಲಿ ಸ್ವಲ್ಪ ಡಿಸ್ಕ್ರಿಷಿನರಿ ಕೋಟಾ ಇದೆ ಅಂತ ತಿಳಿದುಕೊಂಡು ಅನೇಕ ರಿಕ್ವೆಸ್ಟ್‌ಗಳು ಬರುತ್ತಿರುತ್ತವೆ ಅಡ್ಮಿಷನ್ಸ್ ಸಲುವಾಗಿ ಮಾಡಿರಿ. ನಾನು ಬೇಡ ಅನ್ನುವುದಿಲ್ಲ. ಸುಮಾರು 1957 ನೇ ಇಸವಿಯಿಂದ ಪ್ರೈವೇಟ್ ಕಾಲೇಜುಗಳಲ್ಲಿ ಎಂದಾದರೂ ಈ ರೀತಿ ಕಂಪ್ಲೇಂಟ್ ಬಂದಿತ್ತಾ? ನೀವು ವೇಳೆಗೆ ಸರಿಯಾಗಿ ಅಡ್ಮಿಷನ್ಸ್ ಮಾಡಿದ್ದರೆ ನಿಮಗೆ ಯಾವ ತೊಂದರೆಗಳೂ

ತಾಪತ್ರಯಗಳೂ ಬರುವುದಿಲ್ಲ. ಈಗಂತೂ ಡೈರೆಕ್ಟರನ್ನು ತೆಗೆದು ಒಬ್ಬ ವಿಶೇಷ ಐ.ಎ.ಎಸ್. ಅಧಿಕಾರಿಯನ್ನು ಅಪಾಯಿಂಟ್ ಮಾಡಿದ್ದೀರಿ. ಆದರೂ ಕೂಡ ಈ ಸಮಸ್ಯೆ ಪರಿಹಾರ ಆಗಿಲ್ಲ. ಏನು ಕೆಲಸ ಇರುತ್ತದೆ ಅವರಿಗೆ? ವೇಳೆಗೆ ಸರಿಯಾಗಿ ಕೆಲಸ ಮಾಡುವುದಕ್ಕೆ ಬರುವುದಿಲ್ಲವಾ ಅವರಿಗೆ? ತಾವು ನಿಗಾ ಇಡುವುದಿಲ್ಲವಾ ಅವರ ಮೇಲೆ? ಮೇಲ್ವಿಚಾರಣೆ ಇಲ್ಲವೆ? ಅದಕ್ಕಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ.......

ಡಾ : ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ಮಂತ್ರಿಗಳು) :- ಏತಕ್ಕೆ ವಿಳಂಬ ಆಗುತ್ತಿದೆ ಎನ್ನುವ ಬಗ್ಗೆ ಹೇಳುತ್ತೇನೆ. ಈ ಸೀಟು ಹಂಚಿಕೆ ಏನಿದೆ ಸುಪ್ರೀಂ ಕೋರ್ಟ್ ಹಿಂದೆ ಏನು ಆದೇಶ ನೀಡಿತ್ತು ಅದರ ಬಗ್ಗೆ ಮತ್ತೆ ಪುನರ್ ಆಲೋಚನೆ ಮಾಡಿ ಈ ತಿಂಗಳು 25 ನೇ ತಾರೀಖು ಇತ್ತು ಮತ್ತೆ ನಿನ್ನೆ ಇತ್ತು, ಮತ್ತೆ 5ನೇ ತಾರೀಖಿಗೆ ಹೋಗಿದೆ. ಈ ಒಂದು ಕಾರಣದಿಂದ ಸಿ.ಇ.ಟಿ.ನಲ್ಲಿ ಮತ್ತು ಪೋಸ್ಟ್ ಗ್ರಾಜುಯೇಷನ್‌ಗೆ ನಾವು ಏನು ಹಂಚಿಕೆ ಮಾಡಬೇಕಾಗಿತ್ತು ಆ ಸುಪ್ರೀಂ ಕೋರ್ಟ್ ತೀರ್ಮಾನಕ್ಕೋಸ್ಕರ ವಿಳಂಬ ಆಗುತ್ತಿದೆ. ಇಲ್ಲದಿದ್ದರೆ ತಾವು ಹೇಳಿದ ಹಾಗೆ ಆಗಸ್ಟ್ ತಿಂಗಳ ಕೊನೇ ಹಂತದಲ್ಲಿ ಎಲ್ಲಾ ಮೆಡಿಕಲ್ ಸೀಟುಗಳು ಪೋಸ್ಟ್ ಗ್ರಾಜುಯೇಷನ್ ಸೀಟುಗಳನ್ನು ಹಂಚಬೇಕು ಅನ್ನತಕ್ಕ ಆಲೋಚನೆ ತಾವು ಹೇಳಿದ್ದು ಸೂಕ್ತವಾಗಿದೆ. ಅದೇರೀತಿಯಲ್ಲಿ ನಾವು ಮಾಡುತ್ತಿದ್ದೇವೆ. 5 ನೇ ತಾರೀಖು ಕೋರ್ಟ್ ಜಡ್ಜ್‌ಮೆಂಟ್ ಆದನಂತರ ನಾವು ಅದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ನಾನು ಒಂದು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈಗ ಸುಪ್ರೀಂ ಕೋರ್ಟ್‌ನವರು ವೈದ್ಯಕೀಯ ಮತ್ತು ತಾಂತ್ರಿಕ ಪ್ರವೇಶಕ್ಕೆ ಒಂದು ಸ್ಕೀಮ್‌ನ್ನು ಅವರೆಲ್ಲಾ ಮಾಡಿದ್ದಾರೆ. ಫೀಸ್ ಎಷ್ಟು ಹಾಕಬೇಕು ಏನು ಎನ್ನುವುದನ್ನೆಲ್ಲಾ ಮಾಡಿದ್ದಾರೆ. ವಸ್ತುಸ್ಥಿತಿ ಏನು ಅಂದರೆ ಇವತ್ತು ಕೇವಲ ತಾಂತ್ರಿಕ ವಿದ್ಯಾಭ್ಯಾಸಕ್ಕೆ ಮಾತ್ರ ಶುಲ್ಕಗಳನ್ನು ನಿಷ್ಕರ್ಶೆ ಮಾಡತಕ್ಕಂಥದ್ದಲ್ಲ. ಇಡೀ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಪ್ರೌಢಶಾಲೆಗಳಲ್ಲಿ ಕಾಲೇಜುಗಳಲ್ಲಿ ಶುಲ್ಕವನ್ನು ವಿಧಿಸತಕ್ಕಂಥ ವಿಧಿ ವಿಧಾನಗಳು ನಮ್ಮಲ್ಲಿದ್ದಾವೆ. ಹಾಗಿದ್ದರೆ ಇನ್ನು ಮೇಲೆ ಎಲ್ಲಾ ಶಾಲಾಕಾಲೇಜುಗಳು ವಿದ್ಯಾಕ್ಷೇತ್ರದಲ್ಲಿ ವಿಧಿಸತಕ್ಕಂಥ ಎಲ್ಲಾ ಶುಲ್ಕವನ್ನೂ ಕೂಡ ಸುಪ್ರೀಂ ಕೋರ್ಟಿನ ಅಧೀನಕ್ಕೆ ವಹಿಸಿಕೊಟ್ಟು ಅವರು ಏನು ತೀರ್ಮಾನ ಮಾಡುತ್ತಾರೆ ಅದರ ಪ್ರಕಾರ ತಾವು ಮಾಡುವುದಕ್ಕೆ ಚಿಂತನೆ ಮಾಡುತ್ತೀರಾ ಅಥವಾ ಸರ್ಕಾರ ಅಂದಮೇಲೆ ನಿಮಗೆ ಎಗ್ಸಿಕ್ಯುಟೀವ್ ಪವರ್ಸ್ ಇದೆ. ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗ ಎಂದು ಮೂರುವಿಧಗಳು ಇವೆ. ಕಾರ್ಯಾಂಗಕ್ಕೆ ಇದ್ದಂಥ ಒಂದು ಸಾರ್ವಭೌಮತ್ವ ಅಧಿಕಾರವನ್ನು ಸಂಪೂರ್ಣವಾಗಿ ನೀವು ಅವರಿಗೆ ಸರೆಂಡರ್ ಮಾಡಿ ಇವತ್ತು ಅವರ ಹೇಳಿಕೆಯಂತೆ ನಡೆಯುತ್ತಿದ್ದೀರಿ ಅಂದ ಮೇಲೆ ಇಡೀ ವಿದ್ಯಾಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎಲ್ಲಾ ಶುಲ್ಕವನ್ನು ವಿಧಿಸತಕ್ಕಂಥ ಕಾರ್ಯಜವಾಬ್ದಾರಿಯನ್ನು ಸುಪ್ರೀಂ ಕೋರ್ಟಿಗೆ ವಹಿಸಿಕೊಡುವುದಕ್ಕೆ ತಾವು ಏತಕ್ಕೆ ಆಲೋಚನೆ ಮಾಡಬಾರದು?

ಡಾ : ಶಂಕರ ನಾಯಕ್ :– ಮಾನ್ಯ ಉಪಾಧ್ಯಕ್ಷರೆ, 1993-94 ರಲ್ಲಿ ಏನು ಈ ಆದೇಶ ಬಂತು ಆಗ ಅವರೂ ಮಂತ್ರಿಗಳಾಗಿದ್ದರು, ಅವರದೇ ಸರ್ಕಾರ ಇತ್ತು. ಅವರು ಅದನ್ನು ಏತಕ್ಕೆ ಪಾಲನೆ ಮಾಡಿದರೋ ನನಗಂತೂ ಅರ್ಥವಾಗುತ್ತಿಲ್ಲ. ಅವರು ಪಾಲನೆ ಮಾಡಿದ್ದನ್ನೇ ನಾವು ಮಾಡುತ್ತಾ ಇರುವುದು. ನಮ್ಮ ಗಮನಕ್ಕೆ ಬಂದಹಾಗೆ ಸುಪ್ರೀಂ ಕೋರ್ಟ್ ಯಾವುದೇ ಒಂದು ಆದೇಶ ನೀಡಿದರೂ ಅದನ್ನು ಪಾಲಿಸತಕ್ಕದ್ದು ಪ್ರತಿಯೊಬ್ಬರ ಜವಾಬ್ದಾರಿ; ಅದು ಸರ್ಕಾರವಾಗಿರಬಹುದು, ಇನ್ಸ್ಟಿಟ್ಯೂಷನ್ ಆಗಿರಬಹುದು ಅಥವಾ ಇಂಡಿವಿಜುಯಲ್ ಆಗಿರಬಹುದು ಆದರೆ ಇದರಲ್ಲಿ ಸ್ಪೆಸಿಫಿಕ್ಕಾಗಿ ಮೆಡಿಕಲ್‌ಗೆ, ಡೆಂಟಲ್‌ಗೆ ಅಪ್ಲೈ ಮಾಡಬೇಕು ಎಂದು ಇಲ್ಲ ತಾವು ಹೇಳಿದ ಹಾಗೆ. ನಾನು ಮೊನ್ನೆ ಎಲ್ಲಾರದೂ ಸಭೆ ಕರೆದಾಗ ಸಹ ಹೇಳಿದ್ದೇನೆ. ಎಲ್.ಕೆ.ಜಿ. ಮಕ್ಕಳನ್ನು ಪ್ರಾಥಮಿಕ ಶಿಕ್ಷಣಕ್ಕೆ ಮುಂಚೆ ಸೇರಿಸುತ್ತೇವಲ್ಲ ಅಲ್ಲಿಂದ ಹಿಡಿದು ವಿದ್ಯಾಭ್ಯಾಸದ ಕೊನೆಯವರೆಗೂ ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಬಹುದು. ಈಗ ಏನು ನಡೆಯುತ್ತಿದೆ, ಪ್ರೈಮರಿ ಎಜುಕೇಷನ್‌ನಲ್ಲಿ ಲೋಯರ್ ಎಜುಕೇಷನ್‌ನಲ್ಲಿ 25 ಸಾವಿರ 50 ಸಾವಿರ ಲಕ್ಷಗಟ್ಟಲೆ ಡೊನೇಷನ್ ತೆಗೆದುಕೊಳ್ಳುತ್ತಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಅದಕ್ಕೆ ಕಡಿವಾಣ ಹಾಕಬೇಕಾದರೆ ಸರ್ಕಾರದಿಂದ 50 ಪರ್ಸೆಂಟ್ ಫ್ರೀ ಸೀಟು ಏನು ನಾವು ಕೊಡುತ್ತಿದ್ದೇವೆ ಜೊತೆಗೆ ಪೇಮೆಂಟ್ ಸೀಟು ಅಂತ ಹೇಳಿ 15 ಪರ್ಸೆಂಟ್, ಮತ್ತೆ ಮ್ಯಾನೇಜ್‌ಮೆಂಟಿನದು, 15 ಪರ್ಸೆಂಟ್, 20 ಪರ್ಸೆಂಟ್ ಎಂದು ಆ ರೀತಿಯಾಗಿ ಸುಪ್ರೀಂ ಕೋರ್ಟ್ ಆದೇಶವನ್ನು ಮೆಡಿಕಲ್ ಮತ್ತು ಡೆಂಟಲ್‌ನಲ್ಲಿ ಅದನ್ನು ಜಾರಿ ಗೊಳಿಸಿದ್ದೇವೆ. ಕಾರಣ ಏನೆಂದರೆ ಅದರಲ್ಲಿ ಜಾಸ್ತಿ ಅವ್ಯವಹಾರ ನಡೆಯುತ್ತಿದೆ, ಡಿಮ್ಯಾಂಡ್ ಜಾಸ್ತಿ ಇದೆ ಎನ್ನುವಂಥದ್ದು. ಒಂದು ಉದ್ದೇಶದ ಮೇಲೆ ನಾವು ಅದನ್ನು ಫಾಲೋ ಮಾಡುತ್ತಿದ್ದೇವೆ. ಅದನ್ನು ಬೇರೆ ರಂಗದಲ್ಲಿ ಮಾಡಬಾರದು ಎಂದು ಏನೂ ಇಲ್ಲ. ಅದನ್ನು ತೀರ್ಮಾನ ತೆಗೆದುಕೊಂಡರೆ ಸರ್ಕಾರ ಅದರ ಬಗ್ಗೆ ಆಲೋಚನೆ ಮಾಡುತ್ತದೆ, ತೀರ್ಮಾನ ತೆಗೆದುಕೊಳ್ಳುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ :– ನಾನು ಏನು ಸಲಹೆ ನೀಡಿದೆ ಅಂದರೆ ಸರ್ಕಾರ 83 ರಿಂದ ಅಥವಾ ಬೇರೆ ವರ್ಷಗಳಲ್ಲಿ ಮಾಡಿರತಕ್ಕ ಲೋಪದೋಷಗಳನ್ನು ಸುಪ್ರೀಂ ಕೋರ್ಟಿನವರು ಕಂಡುಹಿಡಿದು ಶುಲ್ಕ ನಿಗದಿ ಮಾಡಿರತಕ್ಕದ್ದು ಮಾಡಿದ್ದಾರೆ. ಸರ್ಕಾರ ಮಾಡತಕ್ಕಂಥ ಕೆಲಸವನ್ನು ಇವತ್ತು ಅವರು ಮಾಡಿದ್ದಾರೆ. ಅದಕ್ಕೆ ನಿಮಗೆ ಸರ್ಕಾರಕ್ಕೆ ಇರತಕ್ಕ ಸಾರ್ವಭೌಮತ್ವವನ್ನು ಉಳಿಸಿಕೊಳ್ಳುವ ದೃಷ್ಟಿಯಿಂದ ಸುಪ್ರೀಂ ಕೋರ್ಟ್ ತೀರ್ಮಾನದ ಒಂದು ಹಿನ್ನೆಲೆಯಲ್ಲಿ ಒಂದು ವಿಶೇಷವಾದಂಥ ಶಾಸನವನ್ನು ತಂದು ಇದನ್ನು ರೆಗ್ಯುಲೇಟ್ ಮಾಡತಕ್ಕಂಥ ಕೆಲಸಕ್ಕೆ ದಯವಿಟ್ಟು ಆಲೋಚನೆ ಮಾಡಿ.

ಡಾ : ಶಂಕರ್ ನಾಯಕ್ :– ಮಾನ್ಯ ಉಪಾಧ್ಯಕ್ಷರೆ, ಸಾರ್ವಭೌಮತ್ವ ಸರ್ಕಾರಕ್ಕಿದೆಯೇ ಅಥವಾ ಸುಪ್ರೀಂ ಕೋರ್ಟಿಗೆ ಇದೆಯೇ? ಸುಪ್ರೀಂ ಕೋರ್ಟ್ ಕೊಡತಕ್ಕ ಆದೇಶವನ್ನು ಸರ್ಕಾರ ಪರಿಪಾಲಿಸತಕ್ಕದ್ದು ಇದೆ. ಅದು ತಮಗೆ ಗೊತ್ತಿದೆ. ತಾವು ವಕೀಲರಿದ್ದೀರಿ. ಸುಪ್ರೀಂ ಕೋರ್ಟ್ ಯಾವುದೇ ಒಂದು ಆದೇಶ ಕೊಟ್ಟರೆ ಸರ್ಕಾರ ಅದರ ವಿರುದ್ಧವಾಗಿ ಹೋಗಬಹುದೇ?

ಉಪಾಧ್ಯಕ್ಷರು :– ಆ ರೀತಿ ಹೇಳುವುದಿಲ್ಲ ಅವರು.

ಶ್ರೀ ಕಾಗೋಡು ತಿಮ್ಮಪ್ಪ:- ವಿರುದ್ಧ ಎಂದು ನಾನು ಹೇಳುವುದಿಲ್ಲ.

ಉಪಾಧ್ಯಕ್ಷರು :- ಅವರು ಏನು ಹೇಳುತ್ತಿದ್ದಾರೆ ಅಂದರೆ ಸುಪ್ರೀಂ ಕೋರ್ಟ್‌ಗೆ ಹೋಗದಂತೆ ನೀವೇನಾದರೂ ಅದಕ್ಕೆ ವ್ಯವಸ್ಥಿತವಾದಂಥ ಕಾಯಿದೆ ನೀವು ತರುತ್ತೀರಾ ಹೇಗೆ ಅಂತ ಹೇಳುತ್ತಿದ್ದಾರೆ.

ಡಾ : ಶಂಕರ್ ನಾಯಕ್ :- ಅದನ್ನು ಪರಿಶೀಲಿಸುತ್ತೇವೆ.

ಡಾ : ಎ. ಬಿ. ಮಲಕರೆಡ್ಡಿ :- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳಿಗೆ ಗೊತ್ತಿಲ್ಲ. ಸರ್ಕಾರ ಈಗಾಗಲೇ 88 ನೇ ಇಸವಿಯಲ್ಲಿ ಶಾಸನ ಮಾಡಿದೆ. ಮತ್ತೊಂದು ಶಾಸನ ಮಾಡುವುದು ಬೇಕಾಗಿಲ್ಲ. ಯಾವ ಸರ್ಕಾರ ಕೂಡ ವಂತಿಗೆ ತೆಗೆದುಕೊಂಡು ಸೀಟು ಕೊಡು ಎಂದು ಹೇಳುವುದಿಲ್ಲ. ಕಾನ್‌ಸ್ಟಿಟ್ಯೂಷನ್‌ನಲ್ಲೂ ಹೇಳುವುದಿಲ್ಲ, ಇಲ್ಲೂ ಹೇಳುವುದಿಲ್ಲ. 88 ರಲ್ಲಿ ಆ ಶಾಸನ ಪಾಸ್ ಆಗಿದೆ. ಇಷ್ಟೇ ಹೇಳಬೇಕು, ಆ ಶಾಸನವನ್ನು ಜಾರಿಗೆ ತರುವುದಕ್ಕೆ ಬೇಕಾದ ಪೊಲಿಟಿಕಲ್ ವಿಲ್ ಇಲ್ಲ. ಶಾಸನ ಇದೆ. ಆದರೆ ಅದನ್ನು ಎನ್‌ಫೋರ್ಸ್ ಮಾಡುವವರು ಯಾರು? ಅದಕ್ಕೆ ನಾನು ಸರ್ಕಾರದ ಚ್ಯುತಿ ಎಂದು ಹೇಳುತ್ತಿದ್ದೇನೆ. ಮಾನ್ಯ ನಾಯಕ್ ಅವರು ಹೇಳಿದ್ದುದು ಅದು. ನನಗೂ ಗೊತ್ತು ಮೂರು ನಾಲ್ಕು ವರ್ಷಗಳಿಂದ ಸುಪ್ರೀಂ ಕೋರ್ಟಿನಿಂದ ಪದೇ ಪದೇ ಬರತಕ್ಕ ಆಜ್ಞೆಗಳಿಂದ ತಡವಾಗಿದೆ ಗೊತ್ತು. ನಾನು ಹೇಳುತ್ತಾ ಇರುವುದು 1983 ನೇ ಇಸವಿಯಿಂದ ಇದಾಗುತ್ತಿದೆ. ಏಕೆಂದರೆ ಅದರಲ್ಲಿ ಡೈರೆಕ್ಟ್ ಕೊಲ್ಯೂಷನ್ ಗೌರ್ನಮೆಂಟ್ ಮತ್ತು ಮ್ಯಾನೇಜ್ ಮೆಂಟಿನದು ಇರುವುದರಿಂದ ಆಗುತ್ತಿದೆ. ತಾವು ಹೊಸದಾಗಿ ಬಂದಿದ್ದೀರಿ. ಸುಪ್ರೀಂ ಕೋರ್ಟ್ ಆಜ್ಞೆಯ ಬೆಂಬಲ ಕೂಡ ತಮಗಿದೆ. ಈ ಕೊಲ್ಯೂಷನನ್ನು ಬ್ರೇಕ್ ಮಾಡಿ. ನಾನು ಏತಕ್ಕೆ ಇವನ್ನು ಹೇಳುತ್ತಿದ್ದೇನೆ ಎಂದರೆ ಮೊದಲ ಕಾಲದಲ್ಲಿ ಎಂ.ಬಿ.ಬಿ.ಎಸ್. ಕೋರ್ಸ್ ನಮ್ಮ ದೇಶದಲ್ಲಿ ಐದೂವರೆ ವರ್ಷ ಇತ್ತು. ಪರದೇಶದಲ್ಲಿ ಹತ್ತೂವರೆ, ಹನ್ನೊಂದು ವರ್ಷ ಇತ್ತು. ಮೊದಲು ಆರು ವರ್ಷ ಇತ್ತು. ಆರು ವರ್ಷ ಇದ್ದುದನ್ನು, ಐದೂವರೆ ವರ್ಷ ಇದ್ದುದನ್ನು ಈಗ ನಾಲ್ಕೂವರೆ ವರ್ಷ ಮಾಡಿದ್ದೇವೆ. ಅಡ್ಮಿಷನ್‌ನಲ್ಲೇ ಆರು ತಿಂಗಳು ಹೋಗಿ ಬಿಡುತ್ತದೆ. ಒಂದೇ ವರ್ಷ ವಿದ್ಯಾರ್ಥಿಗಳು ಕಲಿಯುವುದು. ಈ ಒಂದು ವರ್ಷದಲ್ಲಿ ಇಂಥ ಕಠಿಣ ಸಿಲಬಸ್ಸನ್ನು ಅಭ್ಯಾಸ ಮಾಡಿ ವಿದ್ಯಾರ್ಥಿ ಯಾವರೀತಿಯ ವಿದ್ಯೆಯನ್ನು ಗಳಿಸಬಹುದು ತಾವೇ ಆಲೋಚನೆ ಮಾಡಿ. ಅದಕ್ಕಾಗಿ ಕಳಕಳಿಯಿಂದ ಪುನಃ ಪುನಃ ಕೇಳುತ್ತಿದ್ದೇನೆ. ಅಂಡರ್ ಗ್ರಾಜುಯೇಟ್ಸ್ ಮತ್ತು ಪೋಸ್ಟ್ ಗ್ರಾಜುಯೇಟ್ಸ್ ಅಡ್ಮಿಷನ್ಸ್ ವಿಷಯದಲ್ಲಿ ಸೆಪ್ಟೆಂಬರ್ 30 ಕ್ಕೆ ಇತಿಶ್ರೀ ಹಾಡಿಬಿಡಿ ಮೆಡಿಕಲ್ ಕಾಲೇಜ್‌ಗಳಲ್ಲಿ ಆಮೇಲೆ ವಿದ್ಯಾರ್ಥಿಗಳ ಪ್ರವೇಶ ಆಯಿತು. ನಿನ್ನೆಯೂ ಕೂಡ ತಾವು ಇರಲಿಲ್ಲ. ನಾನು ಹೇಳುತ್ತಾ ಇದ್ದೆ. ತಮ್ಮ ಅಧಿಕಾರಿಗಳು ವರದಿ ಕೊಟ್ಟಿರಬಹುದು. ವೈದ್ಯಕೀಯ ಶಿಕ್ಷಣಕ್ಕೆ ಒಬ್ಬ ಮಂತ್ರಿ ಖುದ್ದಾಗಿ ಈ ಖಾತೆಗಿರುತ್ತಾನೆ ನೀವು ಉಸ್ತುವಾರಿ ಮಾಡತಕ್ಕದ್ದು ಕೇವಲ 4 ಮೆಡಿಕಲ್ ಕಾಲೇಜುಗಳ ಮತ್ತು ಆರು ಮೆಡಿಕಲ್ ಕಾಲೇಜುಗಳಿಗೆ ಹೊಂದಿಕೊಂಡಂತೆ 4 ಮೇಜರ್ ಆಸ್ಪತ್ರೆಗಳು. ಮತ್ತು ಇನ್ನೂ 5 ಆಸ್ಪತ್ರೆಗಳು ಪ್ರೈವೇಟ್

ಕಾಲೇಜಿಗೆ ಹೊಂದಿಕೊಂಡಂತೆ ಇರುತ್ತವೆ. ಇಷ್ಟನ್ನು ತಾವು ನೋಡಬೇಕು. ಆದರೆ ಈ 4 ಮೆಡಿಕಲ್ ಕಾಲೇಜುಗಳು ಯಾವ ಪರಿಸ್ಥಿತಿಯಲ್ಲಿವೆ ಎಂದರೆ ಒಬ್ಬ ಬಡರೋಗಿ ಕೂಡ ಇವತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಪ್ರವೇಶ ಪಡೆದುಕೊಂಡು ಉತ್ತಮವಾದ ಚಿಕಿತ್ಸೆಯನ್ನು ಹೊಂದಿ ಹೊರಬರುತ್ತೇನೆ ಎನ್ನುವ ಭರವಸೆಯನ್ನು ಹೊಂದಿಲ್ಲ. ಏಕೆ ಈ ರೀತಿ ಆಗುತ್ತಿದೆ? ಹುಬ್ಬಳ್ಳಿ ಮತ್ತು ಬಳ್ಳಾರಿ ಉದಾಹರಣೆಯನ್ನು ನಿನ್ನೆ ಹೇಳುತ್ತಿದ್ದೆ. ಅಲ್ಲಿ 60 ಪರ್ಸೆಂಟ್ ಮೆಡಿಕಲ್ ಸ್ಟಾಫ್ ಇರುತ್ತಾರೋ ಇಲ್ಲವೋ ಎಂದು ನಿನ್ನೆ ನಾನು ಹೇಳುತ್ತಿದ್ದೆ. ಯಾರೋ ನನಗೆ ಫೋನ್ ಮಾಡಿ ಹೇಳಿದರು ಬಹುಶಃ ಅವರು ತಿಳಿದುಕೊಂಡಿರಬೇಕು. ಬಳ್ಳಾರಿಯಿಂದ ನಿನ್ನೆ ಒಬ್ಬ ಪ್ರೊಫೆಸರ್ ನನ್ನ ಫ್ರೆಂಡ್ ಫೋನ್ ಮಾಡಿದ್ದ ರಾತ್ರಿ. ಸ್ವಾಮಿ 50 ಪರ್ಸೆಂಟ್ ಅಲ್ಲ, ಕೇವಲ 37 ಪರ್ಸೆಂಟ್ ಸ್ಟಾಫ್ ಮೆಂಬರ್ಸ್ ಇರುತ್ತಾರೆ ಎಂದು ನನಗೆ ಫೋನ್ ಮಾಡಿ ಹೇಳಿದ. ಇದು ಕೇವಲ ಅಂಡರ್‌ಗ್ರಾಜುಯೇಟ್ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡತಕ್ಕ ಸಂಸ್ಥೆಯಲ್ಲ. ಪೋಸ್ಟ್ ಗ್ರಾಜುಯೇಟ್ಸ್‌ಗೂ ಕೂಡ ಶಿಕ್ಷಣ ಕೊಡತಕ್ಕ ಸಂಸ್ಥೆ. ಅಂದರೆ ನಾವು ಎಷ್ಟು ಕ್ರೂರಾಗಿದ್ದೇವೆ, ಎಷ್ಟು ಇನ್‌ಸೆನ್ಸಿಟೀವಾಗಿದ್ದೇವೆ ನಾವು ಎಂದು ಆಲೋಚನೆ ಮಾಡಬೇಕು. ಏಕೆ ತಾವು ಫ್ರೀಕ್ವೆಂಟಲಿ 15 ದಿವಸಕ್ಕೊಮ್ಮೆ ಬೇಡ ತಿಂಗಳಿಗೊಂದು ಸಲ ಹೋಗಿ ಬರಬಹುದಲ್ಲ ಈ ಸಂಸ್ಥೆಗಳಿಗೆ. ಒಂದು ಸಾರಿ ಕಾಲಿಟ್ಟು ಬರಬಹುದು. ನೀವು ಮಂತ್ರಿಗಳಿರಬಹುದು ಹಿಂದೆ ನಿಮ್ಮಂತೆ ಮಂತ್ರಿಗಳಿದ್ದರು ಅವರ ಹಿಂದೆ ಮತ್ತೊಬ್ಬರು ಮಂತ್ರಿಗಳು ಇದ್ದರೂ ಈ ಕೆಲಸ ಏಕೆ ಸಾಧ್ಯವಾಗಲಿಲ್ಲ? ದಯವಿಟ್ಟು ತಾವು ಆಲೋಚನೆ ಮಾಡಿ. ಮೊದಲು ಉತ್ತಮವಾದ ವಿದ್ಯೆಯನ್ನು ಕೊಡಬೇಕಾದರೆ ಸಿಬ್ಬಂದಿ ವರ್ಗಬೇಕು ಮತ್ತು ಬೋಧಕ, ಬೋಧಕೇತರ. ಎರಡನೆಯದು ಅಲ್ಲಿ ಒದಗಿಸತಕ್ಕ ಸೌಲಭ್ಯಗಳು ಸವಲತ್ತುಗಳು. ಮೆಡಿಕಲ್ ಕಾಲೇಜುಗಳಲ್ಲಿ ಸಿಬ್ಬಂದಿಯೂ ಇಲ್ಲ, ಆದರೆ ಬೆಂಗಳೂರು ಮೈಸೂರಿನಲ್ಲಿದೆ. ಮೈಸೂರಿನವರು ಸ್ವಲ್ಪ ಅಧೋಗತಿಯಲ್ಲಿದೆ ಪರಿಸ್ಥಿತಿ. ಬೆಂಗಳೂರಿನಲ್ಲಿ ಸಾಕಷ್ಟು ಪ್ರಮಾಣದಲ್ಲಿದೆ. ಆದರೆ ಈ ಮೂರು ಮೆಡಿಕಲ್ ಕಾಲೇಜುಗಳಲ್ಲಿ ಸಾಕಷ್ಟು ಸಿಬ್ಬಂದಿ ವರ್ಗವೂ ಇಲ್ಲ ಸಾಕಷ್ಟು ಸೌಲಭ್ಯಗಳು ಇಲ್ಲ. ಮೈಸೂರು ಮೆಡಿಕಲ್ ಕಾಲೇಜುಗೆ ನಾನು ಹೆಲ್ತ್ ಮಿನಿಸ್ಟರ್ ಇದ್ದಾಗ ವಿಸಿಟ್ ಮಾಡಿದ್ದೆ. ನನ್ನ ಖಾತೆಗೆ ಅದು ಒಳಪಟ್ಟಿರಲಿಲ್ಲ, ಆದರೂ ಕೂಡ ನಾನು ಮೈಸೂರಿಗೆ ಹೋದಂತಹ ಕಾಲದಲ್ಲಿ ಸ್ವಲ್ಪ ನೋಡಿ ಬರೋಣವೆಂದು ತಿಳಿದುಕೊಂಡು ಭೇಟಿ ಕೊಟ್ಟಿದ್ದೆ. ಏಕೆಂದರೆ ನಾನು ಮೆಡಿಕಲ್ ಕಾಲೇಜಿನಿಂದ ಬಂದವ. ಸ್ವಲ್ಪ ಕುತೂಹಲದಿಂದ ನಾನು ಅಲ್ಲಿ ಹೋಗಿದ್ದೆ. ಅಲ್ಲಿ ಪ್ರತಿಯೊಂದು ಡಿಪಾರ್ಟ್‌ಮೆಂಟ್‌ನ ಪ್ರೊಫೆಸರ್ ಬಂದು ನನಗೆ ಹೇಳುತ್ತಿದ್ದರು. ಆರ್ಟ್ಸ್ ಕಾಲೇಜು ಸ್ಟಾಫ್ ಅಂದರೆ ಹೇಗಿರುತ್ತದೆ ಆ ತರಹ ಇದ್ದೇವೆಯೇ ಹೊರತಾಗಿ ನಾವು ಚಿಕಿತ್ಸೆ ಕೊಡತಕ್ಕ ಆಸ್ಪತ್ರೆಯಲ್ಲಿ ಕೆಲಸ ಮಾಡತಕ್ಕ ವೈದ್ಯರು ನಾವು ಆಗಿಲ್ಲ. ಪ್ರೊಫೆಸರ್ ನಾವಾಗಿಲ್ಲವೆಂದು ಹೇಳುತ್ತಿದ್ದರು. ಇಲ್ಲಿ ಪಿ.ಜಿ. ವ್ಯಾಸಂಗ ಮಾಡತಕ್ಕ ಸಂಸ್ಥೆಗಳಲ್ಲಿ ಒಂದು ಸಂಶೋಧನಾ ಕಾರ್ಯಕ್ರಮ ನಮ್ಮಲ್ಲಿ ಇಲ್ಲ. ಸಂಶೋಧನಾ ಕಾರ್ಯಕ್ರಮಕ್ಕೆ ಪೂರಕವಾಗಿ ಅಲ್ಲಿ ಸಲಕರಣೆಗಳು ಇಲ್ಲ ಆಧುನಿಕ ರೀತಿಯ ಒಂದು ಲೈಬ್ರರಿಯಿಲ್ಲ. ಸುಮಾರು 20 ವರ್ಷಗಳಿಂದ ಆಧುನಿಕ ಜರ್ನಲ್ ಬರುತ್ತಿಲ್ಲವಂತೆ. ಹೊಸ ಆಧುನಿಕ ಸಂಪುಟಗಳು ಬರುತ್ತಿಲ್ಲ. ಪುಸ್ತಕಗಳೇ ಬರುತ್ತಿಲ್ಲ.

ಈ ತರಹ ಇದ್ದಾಗ ಅವರು how can they be up-to-date? How can they keep themselves abreast with the latest development and knowledge? ಸರ್ಕಾರಿಯ ನಾಲ್ಕು ಸಂಸ್ಥೆಗಳಲ್ಲಿ ಈ ದುರ್ವ್ಯವಸ್ಥೆ ಏಕೆ? ಇದು ನನಗೆ ಅರ್ಥವಾಗುತ್ತಿಲ್ಲ. ಇದರಲ್ಲಿ ತಾವು ವಿವೇಚನೆ ಮಾಡಬೇಕು. ಮಂತ್ರಿಗಳು ಅಂದರೆ ಬ್ಯುರೋಕ್ರಸಿ ಕೆಲಸ ಮಾಡುವುದಕ್ಕೆ ಅಲ್ಲ. ಸಂಸ್ಥೆಗಳಲ್ಲಿರತಕ್ಕ ಕುಂದುಕೊರತೆಗಳನ್ನು ಚೆನ್ನಾಗಿ ತಿಳಿದುಕೊಂಡು ಅದಕ್ಕೆ ಪರಿಹಾರ ಒದಗಿಸಿಕೊಡುವುದಕ್ಕೆ, ನಾನು ಇವತ್ತು ಆಫೀಸರ್ಸನ್ನು ಬ್ಲೇಮ್ ಮಾಡುವುದಿಲ್ಲ. ನಾನು ಸರ್ಕಾರವನ್ನು ಬ್ಲೇಮ್ ಮಾಡುತ್ತೇನೆ, ಸಚಿವರನ್ನು ನಾನು ಬ್ಲೇಮ್ ಮಾಡುವುದು. ಅಥವಾ ನಮ್ಮನ್ನು ನಾವು ಶಾಸಕರನ್ನು ನಾವು ಬ್ಲೇಮ್ ಮಾಡಿಕೊಳ್ಳಬೇಕಾಗುತ್ತದೆ. ಶಾಸಕರನ್ನು ಕೂಡ ನಾನು ಅದರಲ್ಲಿ ತೊಡಗಿಸುತ್ತೇನೆ; ಈ ಲೋಪದೋಷಗಳ ಬಗ್ಗೆ. ನಮ್ಮ ಕೆಲಸ ಏನು? ಜನರಿಗೆ ಸೌಲಭ್ಯಗಳು ಸರಿಯಾಗಿ ಸಿಗುತ್ತವೆಯೋ? ಇಲ್ಲವೋ ಸೇವೆ ಸರಿಯಾಗಿ ಸಿಗುತ್ತದೋ ಅಥವಾ ಇಲ್ಲವೊ ಅದನ್ನು ನೋಡಿಕೊಳ್ಳತಕ್ಕದ್ದೆ ಪ್ರತಿನಿಧಿಗಳ ಕೆಲಸ, ಸಚಿವರ ಕೆಲಸ, ನಿಮ್ಮದು ಮೊದಲನೆಯ ಹೊಣೆ ನಮ್ಮದು ಎರಡನೆಯ ಹೊಣೆ. ನಿಮಗೆ ಏಕೆ ಮಾಡುವುದಕ್ಕೆ ಆಗುತ್ತಿಲ್ಲ? ನನಗೆ ಅರ್ಥವಾಗುತ್ತಿಲ್ಲ ನಿಮಗೆ ಏಕೆ ಕಳಕಳಿಯಿಲ್ಲ, ಇಂಟರೆಸ್ಟ್ ಇಲ್ಲ ಅದರಲ್ಲಿ ಅಭಿರುಚಿಯಿಲ್ಲ, ಮಂತ್ರಿ ಆಗುವುದು ಅಂದರೆ ಸುಮ್ಮನೆ ಆರ್ಡರ್ ಮಾಡುವುದೇ, ನಾನು ವಾಚ್ ಮಾಡುತ್ತಿರುತ್ತೇನೆ ಎಂಎಲ್‌ಎಗಳು ಏನಾದರೂ ಕಾಗದವನ್ನು ಮಂತ್ರಿಗಳ ಟೇಬಲ್ ಇಟ್ಟ ತಕ್ಷಣ ಆಗಲೇ ಮಂಜೂರು ಏನು ಮಂಜೂರೊ ಅದೇನೋ ನನಗಂತೂ ಅರ್ಥ ವಾಗುತ್ತಿಲ್ಲ. ಅದನ್ನು ವಿವೇಚನೆ ಮಾಡಬೇಕೋ ಬೇಡವೊ? ಈಗ ನೀವು ಪ್ರೈಮರಿ ಹೆಲ್ತ್ ಸೆಂಟರಿ ತೆಗೆಯುತ್ತೀರಿ. ವರ್ಷಕ್ಕೆ 40-50-60 ನಿನ್ನೆ ನಾನು ಈ ವಿಚಿತ್ರವನ್ನು ಹೇಳುತ್ತಿದ್ದೆ. ಅದಕ್ಕೊಂದು ಸ್ಟಕ್ಚರ್ ಇದೆ, ಅದಕ್ಕೊಂದು ನಾರ್ಮ್ಸ್ ಇದೆ, ಅದಕ್ಕೊಂದು ಲಕ್ಷಣಗಳು ಇವೆ. ಅದಕ್ಕೊಂದು ಕಾರ್ಯಕ್ರಮ ಇದೆ. ಜಿಲ್ಲಾಮಟ್ಟದಲ್ಲಿ ಜಿಲ್ಲಾ ಆಸ್ಪತ್ರೆ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕುಮಟ್ಟ ಎಂದು ಹೇಳುವುದಿಲ್ಲ. ಪ್ರತಿ ಒಂದು ಲಕ್ಷದ 20 ಸಾವಿರ ಜನಸಂಖ್ಯೆಗೆ ಒಂದು ಕಮ್ಯುನಿಟಿ ಹೆಲ್ತ್ ಸೆಂಟರ್ ಇರಬೇಕೆಂದು ಇದೆ. ಸಾಮೂಹಿಕ ಆರೋಗ್ಯಕೇಂದ್ರಗಳನ್ನು ತಾಲ್ಲೂಕುಮಟ್ಟಕ್ಕೆ ತಾವು ಕೊಟ್ಟಿಲ್ಲ. ಒಂದು ಲಕ್ಷದ 20 ಸಾವಿರ ಜನಸಂಖ್ಯೆಯಿರುವ ಕಡೆ ತಾವು ಹೇಗೆ ಸಾಮೂಹಿಕ ಆರೋಗ್ಯ ಕೇಂದ್ರಗಳನ್ನು ಕೊಡುತ್ತೀರಿ? ತಾವು ಆರೋಗ್ಯ ಮಂತ್ರಿಗಳು ಮೈಸೂರಿನಿಂದ ಬಂದಿದ್ದೀರಿ. ತಮಗೆ ಹೇಳತಕ್ಕದ್ದು ಒಂದು ಮಾತು ಇದೆ. ನಾನು ಆರೋಗ್ಯಮಂತ್ರಿಯಾಗಿದ್ದಾಗ ಎಲ್ಲ ಜಿಲ್ಲೆಗಳ ಆರೋಗ್ಯ ಸಂಸ್ಥೆಗಳ ಡೀಟೈಲ್ಸ್ ತೆಗೆದುಕೊಂಡೆ. ಮೈಸೂರು ಜಿಲ್ಲೆಗೆ 506 ಆರೋಗ್ಯ ಸಂಸ್ಥೆಗಳು ಇವೆ. ಪ್ರೈಮರಿ ಹೆಲ್ತ್ ಸಬ್ ಸೆಂಟರ್ಸ್‌ನಿಂದ ಹಿಡಿದು ಮೆಡಿಕಲ್ ಕಾಲೇಜು ಆಸ್ಪತ್ರೆಯವರೆಗೆ 506 ಆಸ್ಪತ್ರೆಗಳಿವೆ. ಮೈಸೂರಿನವರು ಪ್ರಭಾವಶಾಲಿಗಳು ಪ್ರಬುದ್ಧರು ಇರುತ್ತಾರೆಂದು ಆ ಕಡೆಗೆ ತೆಗೆದುಕೊಳ್ಳುವುದಾ? ನಾನು ನಿಮಗೆ ಬ್ಲೇಮ್ ಮಾಡುತ್ತಿಲ್ಲ. ನಾನು 50 ವರ್ಷಗಳಿಂದ ಇದೇ ಕೆಲಸ ಮಾಡಿದ್ದೇವೆ. ನಾರ್ಮ್ಸ್ ಬುಕ್‌ನಲ್ಲಿ ಇರುತ್ತವೆ ಅಷ್ಟೇ ಆದರೆ ಮಾಡತಕ್ಕ ಕೆಲಸ ಏನೆಂದರೆ ಯಾರು ಪ್ರಭಲರು ಇರುತ್ತಾರೆ, ಯಾರು ಪ್ರಭಾವಿಗಳು ಇರುತ್ತಾರೆ, ಅವರ ಕೆಲಸಗಳು ಆಗುತ್ತವೆ.

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂತಹ ಡಾ : ಮಲಕರೆಡ್ಡಿಯವರಿಗೆ ಗೊತ್ತಿದೆ. ನಾನು ಬಂದಮೇಲೆ ಉತ್ತರ ಕರ್ನಾಟಕದ ಬಗ್ಗೆ ಹೆಚ್ಚು ಆಧ್ಯತೆಯನ್ನು ಕೊಟ್ಟು ಕೆಲಸ ಮಾಡಿದ್ದೇನೆ. ಸ್ವತಃ ಅವರಿಗೆ ಗೊತ್ತಿರತಕ್ಕ ವಿಚಾರ. ಏನಾದರೂ ಸಮಸ್ಯೆಗಳು ಇದ್ದರೆ ಅವರ ಜೊತೆಯಲ್ಲಿ ಮಾತನಾಡುತ್ತಿರುತ್ತೇನೆ. ಹಾಗಾಗಿ ಈಗ ವ್ಯತ್ಯಾಸಗಳಾಗಿವೆ. ಎಲ್ಲಿ ನಿಜವಾಗಿಯೂ ವಂಚಿತರಾಗಿದ್ದಾರೆ ಅಲ್ಲಿ ಆಧ್ಯತೆಯನ್ನು ಕೊಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೇವೆ. ಅವರ ಜೊತೆ ಕೂಡ ನಾನು ಮಾತನಾಡುತ್ತೇನೆ.

ಡಾ : ಎ. ಬಿ. ಮಲಕರೆಡ್ಡಿ :- ಮಾನ್ಯ ಮಂತ್ರಿಗಳು ಎಂ.ಬಿ.ಬಿ.ಎಸ್. ಪರೀಕ್ಷೆ ಮಾಡುತ್ತಿದ್ದಾರೆ ಅವರಿಗೆ ಯಶಸ್ಸು ಕೋರುತ್ತೇನೆ. ಇರಲಿ ಪರವಾಗಿಲ್ಲ ಅವರು ಪಾಸ್ ಮಾಡಲಿ. ತಾವು ಹೇಳಿದ ಹಾಗೆ ಆಗಿಲ್ಲ. ನಾನು ಏನು ಮಾಡಿದ್ದೆ, ಎಲ್ಲಾ ವಿವೇಚನೆ ಮಾಡಿ ನಾರ್ತ್ ಕರ್ನಾಟಕಕ್ಕೆ 35 ಆಸ್ಪತ್ರೆ, 80 ಪರ್ಸೆಂಟ್ ಆಸ್ಪತ್ರೆಗಳನ್ನು ನಾನು ನಾರ್ತ್ ಕರ್ನಾಟಕಕ್ಕೆ ಕೊಟ್ಟಿದ್ದೆ. ಏಕೆಂದರೆ ಅಲ್ಲಿ ಬಹಳ ಕೊರತೆ ಇತ್ತು. ಆದರ ನಂತರ ನಿಮ್ಮ ಗೌರ್ನಮೆಂಟ್ ಅಧಿಕಾರಕ್ಕೆ ಬಂದಮೇಲೆ ಅದನ್ನು ತೆಗೆದುಹಾಕಿ, ಮತ್ತೆ ಹಳೆಯ ಮೈಸೂರಿಗೆ ಕೊಟ್ಟಿದ್ದಾರೆ. ನನ್ನ ಜಿಲ್ಲೆಯಲ್ಲಿಯೇ ಆ ಕೆಲಸ ಆಗಿದೆ. ಮಾನ್ಯ ಧರ್ಮಸಿಂಗ್‌ರವರಿಗೆ 30 ಹಾಸಿಗೆ ಸೌಲಭ್ಯವಿರತಕ್ಕ ಒಂದು ಆಸ್ಪತ್ರೆ ಮಂಜೂರು ಮಾಡಿದ್ದೆ. ಅದನ್ನು ಕ್ಯಾನ್ಸಲ್ ಮಾಡಿದ್ದಾರೆ. ಅದನ್ನು ಜನಸಂಖ್ಯೆಯ ಆಧಾರದ ಮೇಲೆ, ನಾರ್ಮ್ಸ್ ಮೇಲೆ ಮಾಡಿದರೆ ಆಗ ಯಾವ ತಂಟೆಯೂ ಬರುವುದಿಲ್ಲ. ಯಾವ ಜಗಳವೂ ಬರುವುದಿಲ್ಲ. ಏಕೆಂದರೆ ಕರ್ನಾಟಕ ಏಕೀಕರಣವಾಗಿ ಸುಮಾರು 40 ವರ್ಷಗಳಾಯಿತು. ಇನ್ನಾದರೂ ಕೂಡ ನಾರ್ತ್ ಕರ್ನಾಟಕ ಸೌತ್ ಕರ್ನಾಟಕ ನನ್ನ ಭಾಗಕ್ಕೆ ಹೆಚ್ಚು ಬರಲಿ ನಿನ್ನ ಭಾಗಕ್ಕೆ ಹೆಚ್ಚು ಬರಲಿ ಅಂದರೆ ನಾವು ಯಾವರೀತಿ ಸರ್ಕಾರವನ್ನು ಡಿಫೆಂಡ್ ಮಾಡಿಕೊಳ್ಳಬೇಕು?

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ :- ನನ್ನ ಭಾಗಕ್ಕೆ ಜಾಸ್ತಿ ಕಾಯಿಲೆಗಳು ಬರಲಿಲ್ಲವೆಂದು ಹೇಳಿ ಏನಾದರೂ...

ಡಾ : ಎ.ಬಿ. ಮಲಕರೆಡ್ಡಿ :- ಅದಲ್ಲ, ಅವಶ್ಯಕತೆ ನೋಡಬೇಕು. ಈಗ ತಾವು 2000 ದ ಇಸವಿಯ ಹೊತ್ತಿಗೆ ಪ್ರತಿಯೊಬ್ಬರಿಗೂ ಆರೋಗ್ಯವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಈಗ ನಾವೇನು ಮಾಡಿದ್ದೇವೆಂದರೆ 5 ಸಾವಿರ ಜನಸಂಖ್ಯೆಗೆ ಒಂದು ಉಪ ಕೇಂದ್ರಗಳನ್ನು ಪ್ರಾರಂಭಮಾಡಿದ್ದೇವೆ. ಈ 5 ಸಾವಿರ ಜನರ ಆರೋಗ್ಯವನ್ನು ನೋಡತಕ್ಕ ಆರೋಗ್ಯ ಉಸ್ತುವಾರಿಯನ್ನು ಉಪಕೇಂದ್ರಗಳು ಏನಿದ್ದಾವೆ ಅವುಗಳಲ್ಲಿ ಜ್ಯೂನಿಯರ್ ಹೆಲ್ತ್ ವರ್ಕರ್ ಇರಬೇಕು, ಸೀನಿಯರ್ ಹೆಲ್ತ್ ವರ್ಕರ್ ಇರಬೇಕು. ಮೇಲ್ ಫೀಮೇಲ್ ಇಬ್ಬರು ಇರಬೇಕು. ಯಾವ ಉಪಕೇಂದ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ ತಾವು ದಯಮಾಡಿ ಹೇಳಬೇಕು. ನಮ್ಮ ಭಾಗದ 8 ಜಿಲ್ಲೆಗಳಲ್ಲಿ ಹಳೆಯ ಮೈಸೂರು ಭಾಗದವರು ಬರುತ್ತಾರೆ ಅವರು ಪ್ರೊಬೆಷನರಿ ಪೀರಿಯಡ್ ಡಿಕ್ಲೇರ್ ಆಗುವವರೆಗೆ

ಇರುತ್ತಾರೆ ಆಮೇಲೆ ಪ್ರಭಾವ ಯೂಸ್ ಮಾಡಿ ಮತ್ತೆ ಎಲ್ಲರೂ ವಾಪಸ್ಸು ಬರುತ್ತಾರೆ. ಇಲ್ಲಿಯೂ ಕೊರತೆಯಿದೆ ಇಲ್ಲಿ ಸಾಕಷ್ಟು ಜನ ಇದ್ದಾರೆಂದು ಹೇಳುವುದಕ್ಕೆ ನಾನು ತಯಾರಾಗಿಲ್ಲ. ಅಲ್ಲಿ 70 ಪರ್ಸೆಂಟ್ ಸಬ್ ಸೆಂಟರ್ಸ್ ಅಂಡ್ ಪ್ರೈಮರಿ ಹೆಲ್ತ್ ಸೆಂಟರ್ಸ್‌ನಲ್ಲಿ ಸಿಬ್ಬಂದಿ ಜಾಗ ಖಾಲಿ ಇದೆ. ಮಾನ್ಯ ಸಚಿವರು ಇಲ್ಲಿದ್ದಾರೆ ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಅರ್ಥಸಚಿವರು ಇದ್ದರೆ ಅವರಿಗೆ ನಾನು ಹೇಳುತ್ತಿದ್ದೆ, ಆರೋಗ್ಯ ಇಲಾಖೆಯಿಂದ ಯಾವ ಬೇಡಿಕೆಗಳು ಬರುತ್ತವೆ ಅವುಗಳಿಗೆಲ್ಲ ಮಂಜೂರಾತಿಯನ್ನು ಕೊಡಬೇಕು. ಮತ್ತೆ ತಾವು ಇನ್ನು 6 ತಿಂಗಳಿನಲ್ಲಿ ಎಲ್ಲಾ ನ್ಯೂನ್ಯತೆಯನ್ನು ತಾವು ಮುಗಿಸಬೇಕು. ಆಗ ಮಾತ್ರ ನಾವು ಅಧಿಕಾರಿಗಳನ್ನು ಕೇಳಲಿಕ್ಕೆ ನಮಗೆ ಹಕ್ಕು ಇದೆ. ನೀವು ಚೆನ್ನಾಗಿ ಕೆಲಸ ಮಾಡಿರಿಯೆಂದು ಹೇಳಬಹುದು. ಅಲ್ಲಿಯವರೆಗೆ ನಾವು ಅಧಿಕಾರಿಗಳಿಗೆ ಯಾವರೀತಿ ಕೇಳಬೇಕು? ಪುನಃ ನಾನು ವೈದ್ಯಕೀಯ ಶಿಕ್ಷಣಕ್ಕೆ ಬರುವುದಾದರೆ ಇವರು ಕೆಲವೊಂದು ಸುಪ್ರೀಂಕೋರ್ಟ್‌ನಿಂದ ಆಜ್ಞೆ ಬಂದಿದೆಯೆಂದು ತಿಳಿದುಕೊಂಡು 15 ವರ್ಷಗಳಿಂದ ಮೆಡಿಕಲ್ ಕಾಲೇಜುಗಳಲ್ಲಿ ರಿಕ್ರೂಟ್‌ಮೆಂಟ್ ಸ್ಟಾಪ್ ಮಾಡಿದ್ದಾರೆ; ರಿಕ್ರೂಟ್‌ಮೆಂಟೇ ಆಗಿಲ್ಲ ಎಲ್ಲಿಯಾದರೂ ಉಂಟೇ? ಅದಕ್ಕೆ ಏನಾದರೂ ಸುಪ್ರೀಂಕೋರ್ಟ್‌ಗೆ ಕನ್ವಿನ್ಸ್ ಮಾಡುವುದು ಬೇಡವೇ? Whether any civic Government can behave like this? 30 ಪರ್ಸೆಂಟ್ ಸ್ಟ್ಯಾಫ್ ಏಕೆ ಇರುತ್ತಾರೆ ಇದೇ ಕಾರಣ. ಅದಕ್ಕೆ ಏನು ಮಾಡಿದರು, ಹುದ್ದೆಗಳನ್ನು ತುಂಬುವುದು ಬೇಡ. ಹುಬ್ಬಳ್ಳಿ ಮತ್ತು ಬಳ್ಳಾರಿ ಮೆಡಿಕಲ್ ಕಾಲೇಜುಗಳಿಗೆ ಅಟಾನಮಿ ಕೊಟ್ಟರು. ಕೇವಲ ಹೆಸರು ಬದಲಾವಣೆಯಾಗಿದೆ ಅಷ್ಟೆ. ಏನು, ಮೊದಲು ಕರ್ನಾಟಕ ಮೆಡಿಕಲ್ ಕಾಲೇಜು ಎಂದು ಇತ್ತು ಈಗ ಅದಕ್ಕೆ ಕಿಮ್ಸ್ ಎಂದು ಕರೆಯುತ್ತಾರೆ. ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಏನಂತ ಮಾಡಿದ್ದಾರೆಂದರೆ ವಿಮ್ಸ್ ಎಂದು ಕರೆಯುತ್ತಾರೆ ಈಗ. ಕಿಮ್ಸ್ ಅಂಡ್ ವಿಮ್ಸ್ ಆದುವೆ ಹೊರತಾಗಿ, ಗುಣಾತ್ಮಕವಾಗಿ ಕೆಲಸ ಮಾಡತಕ್ಕ ರೀತಿಯಲ್ಲಿ ಅವು ಇಲ್ಲ.

ಡಾ : ಎಂ. ಶಂಕರ ನಾಯಕ್ :– ಮಾನ್ಯ ಉಪಾಧ್ಯಕ್ಷರೆ, ನಾನು ಆಗಲೇ ಹೇಳೋಣವೆಂದು ಇದ್ದೆ ತಾವು ಮುಗಿಸುತ್ತೀರಿ ಎಂದು ಸುಮ್ಮನಿದ್ದೆ. ಮತ್ತೆ ಅದರ ಮೇಲೆ ಚರ್ಚೆ ಮಾಡತಕ್ಕ ಅವಶ್ಯಕತೆಯಿಲ್ಲ. ಈಗ ಏನು ಬಳ್ಳಾರಿ ಮತ್ತು ಹುಬ್ಬಳ್ಳಿ ಕಾಲೇಜುಗಳು ಇವೆ ಅವು ಬರೀ ನಾಮಕಾವಸ್ಥೆಗೆ ಮಾತ್ರ ಅಟಾನಮಿ ಆಗಿದೆಯೆಂದು ಹೇಳುತ್ತಾರೆ. ಈ ತಿಂಗಳು 4 ನೇ ತಾರೀಖು ಗೌರ್‍ನಿಂಗ್ ಕೌನ್ಸಿಲ್ ಮೀಟಿಂಗ್ ಕರೆದು ಬೈಲಾ ಒಂದು ಅಪ್ರೂವಲ್ ಮಾಡಬೇಕಾಗಿತ್ತು. ಆ ಬೈಲಾವನ್ನು ಅಪ್ರೂವ್ ಮಾಡಿ ಅವರಿಗೆ ಕೊಡತಕ್ಕ ಅಧಿಕಾರವನ್ನು ಕೊಟ್ಟು ಅಲ್ಲಿ ಡೈರೆಕ್ಟರ್ ಮತ್ತು ಪ್ರಿನ್ಸಿಪಾಲರನ್ನು ಅಪಾಯಿಂಟ್ ಮಾಡಿಬಿಟ್ಟಿದ್ದೇವೆ. ಈಗ ಆಗಬೇಕಾಗಿರುವುದು, ಬಳ್ಳಾರಿ ಮತ್ತು ಹುಬ್ಬಳ್ಳಿ ಮೆಡಿಕಲ್ ಕಾಲೇಜುಗಳಿಗೆ ಯಾವ ಪ್ರೊಫೆಸರ್ ಆಗಲಿ ಲೆಕ್ಚರರ್ ಆಗಲಿ ಪೋಸ್ಟ್‌ಮಾಡಿದರೆ

ಅಲ್ಲಿರುವುದಿಲ್ಲ ಅಲ್ಲಿಗೆ ಹೋಗುವುದಿಲ್ಲ. ಎಲ್ಲರೂ ಬೆಂಗಳೂರು ಮೈಸೂರು ಬೇಕು ಎನ್ನುವವರೇ ಹೊರತು ಅಲ್ಲಿರುತ್ತೇವೆಂದು ಹೇಳುವವರು ಯಾರೂ ಇಲ್ಲ. ಅವರು ಹೇಳಿದ ಹಾಗೆ 1982 ನೇ ಇಸವಿಯಿಂದ ಇಲ್ಲಿಯವರೆಗೆ ಸುಪ್ರೀಂಕೋರ್ಟ್ ಆರ್ಡರ್ ಪ್ರಕಾರ ಲೆಕ್ಚರರ್ಸ್ ಅಪಾಯಿಂಟ್‌ಮೆಂಟ್ ಆಗಿಲ್ಲ. ಈಗ ಅಲ್ಲಿ ಕೆಲಸ ಮಾಡುತ್ತಿರುವವರು ಲೆಕ್ಚರರ್ಸ್ ಮತ್ತು ಅಸಿಸ್ಟೆಂಟ್ ಪ್ರೊಫೆಸರ್ಸ್ ಅವರೆಲ್ಲ ಓ.ಓ.ಡಿ ಮೇಲೆ ಕೆಲಸ ಮಾಡುತ್ತಿದ್ದಾರೆ. ನಾವು ಈಗ ಆಟಾನಮಸ್ ಎಂದು ಮಾಡಿ ಹುದ್ದೆಗಳನ್ನು ತುಂಬತಕ್ಕ ಅಧಿಕಾರವನ್ನು ಡೈರೆಕ್ಟರ್ ಮತ್ತು ಪ್ರಿನ್ಸಿಪಾಲರುಗಳಿಗೆ ಕೊಟ್ಟಿದ್ದೇವೆ. ಖಾಲಿಯಿರತಕ್ಕ ಹುದ್ದೆಗಳನ್ನು ಅವರು ಭರ್ತಿ ಮಾಡಬೇಕಾಗುತ್ತದೆ. ಇನ್ನೊಂದು 15 ದಿವಸ ಅಥವಾ ತಿಂಗಳೊಳಗಡೆ ಆ ಎರಡೂ ಕಾಲೇಜುಗಳಲ್ಲಿ ಅಲ್ಲಿ ಖಾಲಿಯಿರತಕ್ಕ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುತ್ತಾರೆ. ಆಯಾ ಭಾಗದಲ್ಲಿರತಕ್ಕವರನ್ನು ಅಲ್ಲಿ ಭರ್ತಿ ಮಾಡಿಕೊಂಡರೆ, ಅವರು ಈ ಕಡೆಗೆ ಬರುವುದಿಲ್ಲ ಅಲ್ಲಿ ಹುದ್ದೆಗಳು ಖಾಲಿ ಬೀಳತಕ್ಕ ಸಂಭವವಿಲ್ಲ. ಮೈಸೂರು ಮತ್ತು ಬೆಂಗಳೂರಿನ ಎರಡು ಕಾಲೇಜುಗಳಲ್ಲಿ 1994-95ನೇ ಸಾಲಿನಿಂದ ನಾವು ರಿಕ್ರೂಟ್‌ಮೆಂಟ್ ಮಾಡಿಕೊಳ್ಳಬಹುದೆಂದು ಆದೇಶವಿರುವುದರಿಂದ ನಾವು ಕೆಪಿಎಸ್‌ಸಿಗೆ ಬರೆದಿದ್ದೇವೆ. ಅವರು ಲೆಕ್ಚರರ್ಸ್ ಅಪಾಯಿಂಟ್ ಮಾಡುತ್ತಾರೆ. ಅಲ್ಲಿಂದ ಬರತಕ್ಕ ಅಸಿಸ್ಟೆಂಟ್ ಪ್ರೊಫೆಸರ್ಸ್ ಮತ್ತು ಲೆಕ್ಚರರ್ಸ್ ಅವರನ್ನು ಬೆಂಗಳೂರು ಮತ್ತು ಮೈಸೂರು ಮೆಡಿಕಲ್ ಕಾಲೇಜುಗಳಲ್ಲಿ ಭರ್ತಿಮಾಡಿ ಇಲ್ಲಿ ಏನು ಖಾಲಿ ಬೀಳುತ್ತವೆ ಆ ಹುದ್ದೆಗಳನ್ನು ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಮಾಡಬೇಕೆನ್ನುವ ಆಲೋಚನೆ ಸರ್ಕಾರದ್ದು ಇದೆ. ಜೊತೆಗೆ ಒ.ಒ.ಡಿ. ಮೇಲೆ ಏನು ಲೆಕ್ಚರರ್ಸ್ ಇದ್ದಾರೆ, 6-7-8 ವರ್ಷಗಳಿಂದ ಪೋಸ್ಟ್ ಗ್ರ್ಯಾಜ್ಯುಯೇಶನ್ ಮಾಡಿಕೊಂಡು ಅವರು ಕೆಲಸ ಮಾಡುತ್ತಿದ್ದಾರೆ. ಅವರನ್ನೂ ರೆಗ್ಯುಲರೈಸ್ ಮಾಡಬೇಕೆಂದು ಇದೆ. ಆದರೆ ಕೆಲವು ಲೀಗಲ್ ಪಾಯಿಂಟ್ಸ್ ಇವೆ ಅವರನ್ನು ಏನಾದರೂ ರೆಗ್ಯುಲರೈಸ್ ಮಾಡಿದರೆ ಸೀನಿಯರ್ ಅಸಿಸ್ಟೆಂಟ್ ಸರ್ಜನ್ಸ್ ಏನಾಗಿದ್ದಾರೆ, ಅವರು ಪ್ರೊಫೆಸರ್‌ಗಿಂತಲೂ ಹೆಚ್ಚಿಗೆ ಸಂಬಳ ತೆಗೆದುಕೊಳ್ಳುತ್ತಿದ್ದಾರೆ; ಆದರೆ ಅವರು ಲಕ್ಚರರ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ಇದು ಒಂದು ಇಶ್ಯು ಇರುವುದರಿಂದ, ಇವರನ್ನು ಯಾವ ತರಹ ಅಬ್ಸರ್ವ್ ಮಾಡುವುದಕ್ಕೆ ಆಗುತ್ತದೆ ಅಥವಾ ಬೇರೆ ಕೆ.ಪಿ.ಎಸ್.ಸಿ.ಯಿಂದ ತೆಗೆದುಕೊಳ್ಳಬೇಕೋ ಅಂತ ಇದೆ. ಒಂದು ವೇಳೆ ಎರಡೂ ಆಗಿಲ್ಲವೆಂದರೆ ಈ ಸಲ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಲೆಕ್ಚರರ್ಸ್ ತೆಗೆದುಕೊಂಡು ಈ ಎರಡು ಕಾಲೇಜಿನ ಕೆಲಸವನ್ನು ಮಾಡಬೇಕು ಅಂತ ಇದೆ. ಈಗ ಹುಬ್ಬಳ್ಳಿ ಕೆ.ಎಂ.ಸಿ.ಗೆ ನಾವು ಪೂರ್ತಿ ಅಧಿಕಾರವನ್ನು ಕೊಟ್ಟಿದ್ದೇವೆ. ಅಪಾಯಿಂಟ್‌ಮೆಂಟ್ ಮಾಡತಕ್ಕಂಥ ಅಧಿಕಾರ ಅಲ್ಲಿ ಡೈರೆಕ್ಟರ್ ಅವರಿಗೆ, ಪ್ರಿನ್ಸಿಪಾಲ್ ಅವರಿಗೆ ಕೊಟ್ಟಿದ್ದೇವೆ. ಅವರು ಈಗ ಕಾಲ್ ಫಾರ್ ಮಾಡಿ ಇದನ್ನು ಮಾಡುತ್ತಾರೆ ಸದನ ನಡೆಯುತ್ತಿರುವುದರಿಂದ ನಾವು ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ. ಸದನ ಮುಗಿದ ನಂತರ ವೈಸ್ ಛಾನ್ಸಲರ್, ಅಧಿಕಾರಿಗಳು ನಾವು ಒಟ್ಟಾಗಿ ಹೋಗಿ ಒಂದೊಂದು

ಕಾಲೇಜಿನಲ್ಲಿ ಒಂದೊಂದು ವಾರ, ಮೂರು ಮೂರು ದಿವಸ ಇದ್ದು ಎಲ್ಲಾ ರಿಕ್ರೂಟ್‌ಮೆಂಟ್ಸ್ ಮಾಡಿಕೊಂಡು ಬರಬೇಕೆಂದುಕೊಂಡಿದ್ದೇನೆ. ತಮ್ಮ ಸಲಹೆ, ಸಹಕಾರವನ್ನು ಇದರಲ್ಲಿ ನಾನು ಬಯಸುತ್ತೇನೆ.

ಡಾ : ಎ. ಬಿ. ಮಲಕರೆಡ್ಡಿ :- ಹೋದವರ್ಷ ಕೂಡ ಇದೇ ಪ್ರತಿರೂಪದ ಉತ್ತರ ಕೊಟ್ಟರು. ಈ ವರ್ಷವೂ ಹಾಗೆಯೇ ಕೊಡುತ್ತಿದ್ದಾರೆ. ಇವರ ಸಿನ್ನಿಯಾರಿಟಿ ಬಗ್ಗೆ ಪ್ರಶ್ನೆ ಇಲ್ಲ...

ಡಾ : ಎಂ. ಶಂಕರನಾಯಕ್ :- ಹೋದವರ್ಷ ನಾನು ಇರಲಿಲ್ಲ.

ಡಾ : ಎ. ಬಿ. ಮಲಕರೆಡ್ಡಿ :- ಏಕೆಂದರೆ ಈ ಕಾನೂನು ಇದೆಯಲ್ಲ, ಅಟಾನಮಿ ಕನ್‌ಫರ್ಮ್ ಮಾಡಿದ್ದು, ಇದು ನೀವು ಮಾಡಿಲ್ಲ. ಹೋದಸಾರಿ ಮಾಡಿದ್ದುದು. ಏಪ್ರಿಲ್‌ಗೆ ಎರಡು ವರ್ಷ ಸಂಪೂರ್ಣ ಆಯಿತು.

ಡಾ : ಎಂ. ಶಂಕರನಾಯಕ್ :- ಬೈಲಾ ಅಪ್ರೂವ್ ಮಾಡಿರಲಿಲ್ಲ.

ಡಾ : ಎ. ಬಿ. ಮಲಕರೆಡ್ಡಿ :- ಬೈಲಾ ಅಂದರೆ ಅದೇನು ಭಾರತದ ಸಂವಿಧಾನವೇನು? ಅದನ್ನು ಮಾಡುವುದಕ್ಕೆ ಎರಡು ವರ್ಷ ಬೇಕೇ?

ಡಾ : ಎಂ. ಶಂಕರನಾಯಕ್ :- ಆ ಕಾನೂನಿಗೆ ಹೋದ ತಿಂಗಳು ಬೈಲಾ ಅಪ್ರೂವ್ ಆಗಿ ಬಂದಿದೆ. ಅದು ಬಂದ ತಕ್ಷಣ ನಾಲ್ಕನೇ ತಾರೀಕು ನಾವು ಮೀಟಿಂಗ್ ಕರೆದು ಅಪ್ರೂವ್ ಮಾಡಿ ಕಳಿಸಿದ್ದೇವೆ. ಹಿಂದಿನ ಸರ್ಕಾರ ಕಾನೂನು ಇಲಾಖೆಗೆ ಬರೆದಿತ್ತು. ಅಲ್ಲಿಂದ ಬರುವುದಕ್ಕೆ ಮೂರು ತಿಂಗಳಾಯಿತು. ಅದಾದನಂತರ ಅಪ್ರೂವ್ ಮಾಡಿ ಕಳಿಸಿದ್ದೇವೆ. ಈ ತಿಂಗಳಿನಿಂದ ಜಾರಿಗೆ ಬಂದಿದೆ.

ಡಾ : ಎ. ಬಿ. ಮಲಕರೆಡ್ಡಿ :- ಅವರ ಬಗ್ಗೆ ನನಗೆ ಏನೇನೂ ಇಲ್ಲ. ಸರ್ಕಾರದ ಪರವಾಗಿ ಮಾತನಾಡಿದ್ದಾರೆ. ಅಲ್ಲ ಜನರಿಗೆ, ವಿದ್ಯಾರ್ಥಿಗಳಿಗೆ ಏನು ಬೇಕಾಗಿದೆ ಎಂದರೆ ಅವರ ಕಾಲೇಜಿನ ಗುಣಮಟ್ಟ ಉತ್ತಮವಾಗಿರಬೇಕು. ಆದರೆ ಇವರಿಗೆ ಶಾಸನ ಮಾಡುವುದಕ್ಕೆ ಎರಡು ವರ್ಷ, ಬೈಲಾ ಮಾಡುವುದಕ್ಕೆ 2 ವರ್ಷ, ಅಲ್ಲಿಗೆ ನಾಲ್ಕು ವರ್ಷ ಸಂಸ್ಥೆಗಳು ಏನು ಮಾಡಬೇಕು? ಈ ವೈದ್ಯಕೀಯ ವಿದ್ಯಾರ್ಥಿಗಳು ಯಾವರೀತಿ ಶಿಕ್ಷಣ ಗುಣಮಟ್ಟವನ್ನು ಅಲ್ಲಿ ಪಡೆಯುತ್ತಾರೆ? ಇದನ್ನು ತಾವು ದಯವಿಟ್ಟು ಸ್ವಲ್ಪ ಅರ್ಥಮಾಡಿಕೊಳ್ಳಬೇಕು. ಇವತ್ತು ತಾವು ಇದನ್ನು ಕ್ಷಮೆ ಮಾಡುವುದಕ್ಕೆ ತಯಾರಿದ್ದೀರಾ? ಎರಡು ವರ್ಷಬೇಕಾ? ಲಾ ಡಿಪಾರ್ಟ್‌ಮೆಂಟ್‌ನಿಂದ ಬಂದಿಲ್ಲವೆಂದರೆ, ಇದು ಸರ್ಕಾರ ಎಂದರೆ ಒಂದೇ. ನಮಗೆ ಅರ್ಥವಾಗುತ್ತದೆ. ಆದರೆ ಪರವಾಗಿಲ್ಲ, ಇವರ ಪ್ರಮಾಣಿಕತೆಯನ್ನು ಕೂಡ ನಾವು ಪರೀಕ್ಷೆ ಮಾಡಿ ನೋಡೋಣ.

ಕೇವಲ ಬೈಲಾ ಅಪ್ರೂವ್ ಮಾಡುವುದರಿಂದ, ಅಧಿಕಾರ ಕೊಡುವುದರಿಂದ ಸಂಸ್ಥೆಗಳ ಸುಧಾರಣೆ ಆಗುವುದಿಲ್ಲ. ಮೊದಲು ಅವರ ಸಭೆಯನ್ನು ನಾವು ಕರೆದು, ಅವರ ಕುಂದುಕೊರತೆಗಳು ಏನಿವೆ, ಅವರಿಗೆ ಏನು ಸೌಲಭ್ಯಗಳು ಬೇಕು, ಅದ್ದನು ಸ್ವಲ್ಪ ಪ್ರಾಮಾಣಿಕತೆಯಿಂದ ಅಭ್ಯಾಸ ಮಾಡಿ. ಮುಕ್ತಮನಸ್ಸಿನಿಂದ ನೋಡಿ, ಸಮೀಕ್ಷೆ ಮಾಡಿ ಅವರಿಗೆ ಎಷ್ಟು ಹಣ ಬೇಕೋ ಅಷ್ಟು ಹಣ ಒದಗಿಸಿ. ನಿಮಗೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ. ನಮ್ಮ ವಿಷಯ ಸಮಿತಿಯಲ್ಲಿ ನಾನು ಕೂಡ ಸದಸ್ಯನಾಗಿದ್ದೆ, ದುರ್ದೈವದಿಂದ ನೀವು ಬರಲಿಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಕೇವಲ ರಿಪೇರಿಗೆ ಒಂದುಕೋಟಿ ರೂಪಾಯಿ ಬೇಕು. ಈ ವರ್ಷ ಇಡೀ ಇಲಾಖೆಗೆ ರಿಪೇರಿಗೆ 20-30 ಲಕ್ಷ ರೂಪಾಯಿ ಇಟ್ಟಿದ್ದೀರಿ. ಬಳ್ಳಾರಿ ಮೆಡಿಕಲ್ ಕಾಲೇಜಿಗೆ ಒಂದಕ್ಕೇ ರಿಪೇರಿಗಾಗಿ ಒಂದು ಕೋಟಿ ಬೇಕು. ಒಂದು ಕೋಟಿ ಕೊಟ್ಟರೂ ಕಡಿಮೆ. ಮತ್ತು ಲೈಬ್ರರಿಯಲ್ಲಿ ಹತ್ತು ವರ್ಷಗಳ ಹಿಂದೆ ಖರೀದಿ ಮಾಡಿದ ಪುಸ್ತಕಗಳು ಇದ್ದು, ಹೊಸ ಸಂಪುಟಗಳ ಪುಸ್ತಕಗಳು ಇಲ್ಲವೇ ಇಲ್ಲ. ಮತ್ತೆ ಫಿಸಿಯಾಲಜಿ ಡಿಪಾರ್ಟ್‌ಮೆಂಟ್‌ನ್ನು ನಾವು ವಿಸಿಟ್ ಮಾಡಿದ್ದೆವು. ಸುದೈವಕ್ಕೆ, ನಾವು ಅಲ್ಲಿ ಇದ್ದಾಗ ಮೇಲ್ ಛಾವಣಿ ಸರಿಯಿರಲಿಲ್ಲ. ಮಕ್ಕಳು ಅಲ್ಲಿ ಪ್ರಯೋಗ ಮಾಡುತ್ತಿದ್ದರು; ನಾವು ಇನ್‌ಸ್ಪೆಕ್ಷನ್ ಮಾಡಿ ಹೋದ ನಾಲ್ಕನೇ ದಿನಕ್ಕೆ ರಾತ್ರಿ ಅದು ಬಿದ್ದುಹೋಯಿತು. ಹಗಲು ಹೊತ್ತಿನಲ್ಲಿ ಬಿದ್ದಿದ್ದರೆ ಎಷ್ಟು ನಷ್ಟವಾಗುತ್ತಿತ್ತು? ನಾವು ಇನ್‌ಸ್ಪೆಕ್ಷನ್ ಮಾಡಿದ ನಾಲ್ಕನೇ ದಿವಸಕ್ಕೆ ಆ ಛಾವಣಿ ಬಿದ್ದುಬಿಟ್ಟಿತು. ಇಂತಹ ಒಂದು ಪರಿಸ್ಥಿತಿ ಇದೆ, ಛಾವಣಿ ಬಿದ್ದಿದ್ದಕ್ಕೆ ಇನ್ನೂ ಕೂಡ ರಿಪೇರಿಯಾಗಿಲ್ಲ. ನಾವು ರಿಪೋರ್ಟ್ ಕೊಟ್ಟಮೇಲೆ ಒಂದು ಹತ್ತು ರೂಪಾಯಿವರೆಗೂ ಖರ್ಚು ಮಾಡಿಲ್ಲ. ಮತ್ತೆ ವಿಷಯ ಸಮಿತಿ ವರದಿಯನ್ನು ಏಕೆ ಕೊಡಬೇಕು? ವಿಷಯ ಸಮಿತಿಯಲ್ಲಿ ನಮಗೆ ಒಂದು ದಿವಸಕ್ಕೆ ಟಿಎ/ಡಿಎ ಏನು ಕೊಡುತ್ತಾರೆ ಅಷ್ಟು ಹಣ ಅಲ್ಲಿ ಕೊಟ್ಟಿದ್ದರೂ ಸಾರ್ಥಕವಾಗುತ್ತಿತ್ತು. ಏಕೆ ಆ ರೀತಿಯಾಗಿ ನಡೆಸುತ್ತೀರಿ? ಅಟಾನಮಿ ಕೊಟ್ಟಕೂಡಲೇ ಕೆಲಸ ಸುಧಾರಿಸುವುದಿಲ್ಲ. ನೀವು ಮೊದಲು ಕಮಿಟ್ ಆಗಿರಿ, ನೀವು ಸ್ಟಡಿ ಮಾಡಿರಿ. ಪ್ರಾಮಾಣಿಕವಾಗಿ ಎಷ್ಟು ಬೇಕು ಎಂದು ಗೊತ್ತಾಗುತ್ತದೆ, ಕನಿಷ್ಟಪಕ್ಷ ಅಷ್ಟು ಹಣವನ್ನು ಒದಗಿಸಬೇಕು. ಇದನ್ನು ಹಂತಹಂತವಾಗಿ ಎರಡು ವರ್ಷ ಖರ್ಚುಮಾಡಬೇಕಾಗುತ್ತದೆ. ಮಾನ್ಯ ಸಚಿವರು, ಅವರು ಸಮಿತಿಯ ಸದಸ್ಯರಾಗಿದ್ದರು. ಆದೇನೋ ಅವರು ಬರಲಿಲ್ಲ. ಅವರ ಬಗ್ಗೆ ನನಗೆ ಗೌರವ ಇದೆ. ಅವರು ಬಂದಿದ್ದರೆ ಒಳ್ಳೆಯ ಅನುಭವ ಆಗುತ್ತಿತ್ತು. ನಿನ್ನೆ ಕೂಡ ನಾನು ಸ್ವಲ್ಪ ಟಚ್ ಮಾಡಿದ್ದೆ. ನಿಜವಾಗಿಯೂ ಇವತ್ತು ಅದು ಒಂದು ಸೈನ್ಸ್ ಕಾಲೇಜು ಅಂತ ಹೇಳುವುದಕ್ಕೆ ಅರ್ಹತೆ ಇಲ್ಲ. ಇವತ್ತು ಮೆಡಿಕಲ್ ಕಾಲೇಜು ಎಂದು ಹೇಳುತ್ತಿದ್ದೇವೆ, ಪೋಸ್ಟ್ ಗ್ರಾಜ್ಯುಯೇಶನ್ ಇನ್ಸ್ಟಿಟ್ಯೂಟ್ ಅಂತ ಹೇಳುತ್ತದ್ದೇವೆ. ಆದರೆ ಅಲ್ಲಿ ಇಷ್ಟು ಅನರ್ಹತೆ ಇವೆ. ಇದು ಎಷ್ಟು ಅಧೋಗತಿಗೆ ಹೋಗಿದೆ ಎಂದರೆ, ಈಗ ಪರೀಕ್ಷೆ ಸೆಂಟರನ್ನು ಕೂಡ ತೆಗೆದುಹಾಕಿದ್ದಾರೆ. ಹುಡುಗರು ಗುಲ್ಬರ್ಗಾಕ್ಕೆ ಮೆಡಿಕಲ್ ಕಾಲೇಜಿಗೆ ಪರೀಕ್ಷೆ ತೆಗೆದುಕೊಳ್ಳುವುದಕ್ಕೆ ಬರಬೇಕಾಗುತ್ತದೆ. ಏಕೆಂದರೆ it is unfit to

conduct examinations and to provide facilities for examinations. ವಿದ್ಯಾಭ್ಯಾಸ ಕೊಡುವುದಕ್ಕೆ ಮತ್ತು ಪರೀಕ್ಷಾ ಕೇಂದ್ರ ಆಗುವುದಕ್ಕೆ ಅನರ್ಹವಾಗಿದೆ. ದಯಮಾಡಿ ತಾವು ಬಿಲ್ಡಿಂಗ್ಸ್ ಕಡೆ, ಉಪಕರಣಗಳ ಕಡೆ ಗಮನ ಕೊಡಿ. ಉಪಕರಣಗಳ ಬಗ್ಗೆ ಮಾತನಾಡಬೇಕಾದರೆ ಮೂಲಭೂತವಾದ ಉಪಕರಣಗಳೇ ಇಲ್ಲ. ಆಸ್ಪತ್ರೆ ಎಂದರೆ ನೈರ್ಮಲ್ಯದ ವಿಚಾರ ಇರುತ್ತದೆ. ಇವರು ವಾಶಿಂಗ್ ಸೋಡಾ, ಡಿಟರ್ಜಂಟ್ಸ್, ಸೋಪ್ ಕೂಡ ಕೊಡುತ್ತಿಲ್ಲ. ಬೆಡ್‌ಗಳನ್ನು ಕವರ್ ಮಾಡುವುದಕ್ಕೆ ಬೆಡ್ ಶೀಟುಗಳು ಇಲ್ಲ. ಅಲ್ಲಿ ಯಾರು ಹೋಗುತ್ತಾರೆ ಎಂದರೆ ಅನಾಥರು ಅಷ್ಟೇ ಉಳಿದುಕೊಂಡಿದ್ದಾರೆ. ಯಾರು ಡಾರ್ಮೆಟರಿಯಲ್ಲಿ, ರಸ್ತೆಬದಿಯಲ್ಲಿ ಡ್ವೆಲ್ಲರ್ಸ್ ಇರುತ್ತಾರೆ, ಅವರು ಅಷ್ಟೇ ಅಲ್ಲಿಗೆ ಹೋಗುವುದು. ಅಲ್ಲಿ ಸರ್ಜಿಕಲ್ ವಾರ್ಡ್ ಮತ್ತು ಆರ್ಥೋಪಿಡಿಕ್ ವಾರ್ಡ್‌ಗಳನ್ನು ನೋಡಿದರೆ ಗೊತ್ತಾಗುತ್ತದೆ. ಇದು ನಾನು ವೈದ್ಯಕೀಯ ವಿದ್ಯಾಸಂಸ್ಥೆಗಳ ಬಗ್ಗೆ ಹೇಳುತ್ತಿದ್ದೇನೆ. ಉಳಿದ ಜಿಲ್ಲಾ, ತಾಲ್ಲೂಕು ಆಸ್ಪತ್ರೆಗಳ ಹಣೆಬರಹ ದೇವರೇ ಬಲ್ಲ. ಯಾವ ಸಂಸ್ಥೆಗಳು ಆದರ್ಶವಾಗಿರಬೇಕು, ಮಾದರಿ ಯಾಗಿರಬೇಕು, ಅಂತಹ ಸಂಸ್ಥೆಗಳ ವಿಚಾರ ನಾನು ಹೇಳುತ್ತಿದ್ದೇನೆ. ಬಿ.ಪಿ. ಅಪರೇಟಸ್ ಇರುವುದಿಲ್ಲ. ಥರ್ಮಾಮೀಟರ್ಸ್ ಇಲ್ಲ, ಸಕ್ಷನ್ ಅಪರೇಟಸ್ ಇಲ್ಲ. ಡೈಯಿಂಗ್ ಪೇಶಂಟ್‌ಗಳಿಗೆ ಅಪತ್ಕಾಲಕ್ಕೆ ಉಪಯೋಗಿಸುವ ಸಕ್ಷನ್ ಅಪರೇಟಸ್ ಇಲ್ಲ. ಕ್ರಿಟಿಕಲ್ ಪೇಶಂಟ್ಸ್‌ಗೆ ಪ್ರತಿ ಐದು ನಿಮಿಷಕ್ಕೊಮ್ಮೆ ಪೀಪಲ್ಸ್‌ನ್ನು ನೋಡಬೇಕಾಗುತ್ತದೆ. ಆದರೆ ಅಲ್ಲಿ ಟಾರ್ಚುಗಳು ಇಲ್ಲ. ಸಿರೆಂಜ್‌ಗಳನ್ನು ಬಾಯಿಲ್ ಮಾಡುವುದಕ್ಕೆ ಕೆರೋಸಿನ್ ಸ್ಟವ್ ಇಲ್ಲ, ಎಲೆಕ್ಟ್ರಿಕಲ್ ಸ್ಟವ್ ಇಲ್ಲ. ಅಂದ ಮೇಲೆ ನೀವು ಆಸ್ಪತ್ರೆಗಳನ್ನು ಯಾವರೀತಿ ನಡೆಸುತ್ತೀರಿ? ಬೆಂಗಳೂರು ರಾಜಧಾನಿಗೆ ಬಳ್ಳಾರಿ ಬಹಳ ದೂರವಾಗುತ್ತದೆ. ನಾನು ಸಂಜಯಗಾಂಧಿ ಆಕ್ಸಿಡೆಂಟ್ ಆಸ್ಪತ್ರೆಯನ್ನು ನೋಡಿದೆ. ನಾನು, ಮಾನ್ಯ ತಂಗಾರವರು, ಕಮಿಟಿಯವರು ಹೋಗಿದ್ದೆವು. ಮಾನ್ಯ ಸಚಿವರು ಕೂಡ ಸದಸ್ಯರಾಗಿ ಅವತ್ತು ಬಂದಿದ್ದರೋ ಏನೋ ಗೊತ್ತಿಲ್ಲ. ಸರ್ಜಿಕಲ್ ಡಿಪಾರ್ಟ್‌ಮೆಂಟ್‌ನಲ್ಲಿ ಟಾರ್ಚ್ ಇರಲಿಲ್ಲ, ಥರ್ಮಾಮಿಟರ್ ಇಲ್ಲ. ಮತ್ತೆ ನಾಲ್ಕು ಗಂಟೆಗೊಮ್ಮೆ ಚಾರ್ಟ್ ಇರುತ್ತದೆ, ನಾಲ್ಕಾರು ಗಂಟೆಗೊಮ್ಮೆ ನಾರ್ಮಲ್ ಇರಲಿ, ಫೀಡಕ್ ಇರಲಿ, ಅಥವಾ ಅಬ್ನಾರ್ಮಲ್ ಇರ ಬಹುದು ಅಂದು ಮ್ಯಾಂಡೇಟ್. ಅವರ ಟೆಂಪರೇಚರ್‌ನ್ನು ರೆಕಾರ್ಡ್ ಮಾಡಬೇಕು. ಆದರೆ ಅಲ್ಲಿ ಥರ್ಮಾಮೀಟರ್ ಇಲ್ಲ. The basic requirement is that for every 4 hours, we have to, record the temperature. That is mandatory. ಇದಕ್ಕೆ ಎಷ್ಟು ಖರ್ಚು ಬರುತ್ತದೆ? ಸರ್ಕಾರಿ ಕಾಲೇಜುಗಳು ಈ ರೀತಿಯಾಗಿದೆ. ಇನ್ನು ಖಾಸಗೀ ಮೆಡಿಕಲ್ ಕಾಲೇಜುಗಳು. ಐದಾರು ಕಾಲೇಜುಗಳಿಗೆ ನೀವು ಸೌಲಭ್ಯಗಳನ್ನು ಕೊಟ್ಟಿದ್ದೀರಿ. ಇದಕ್ಕಾಗಿ ಒಂದು ಸೂತ್ರ ಇದೆ. ಪ್ರತಿ ಪ್ರವೇಶ ಪಡೆಯತಕ್ಕಂಥ ವಿದ್ಯಾರ್ಥಿ 2,500 ರೂಪಾಯಿಗಳ ಫೀಸ್‌ನ್ನು ಕೊಡಬೇಕು, ಅದು ಆಸ್ಪತ್ರೆಗೆ, ಸರ್ಕಾರಕ್ಕೆ ಕೊಡಬೇಕಾಗುತ್ತದೆ.

1-10 ಪಿ.ಎಂ.

ಆ ಪ್ರೈವೇಟ್ ಕಾಲೇಜಿನವರು ಏನು ಕೊಡುತ್ತಾರೆ, ಅದಲ್ಲದೆ 2,500 ರೂಪಾಯಿಗಳನ್ನು ಆ ಆಸ್ಪತ್ರೆಯವರಿಗೆ ಕೊಡಬೇಕು ಅವರು. ನಿಮ್ಮ ಜಿಲ್ಲಾ ಸರ್ಜನ್ ಇದನ್ನು ಕಲೆಕ್ಟ್ ಮಾಡಬೇಕು. The principal of the College and District Surgeon together, they must collect. ಇದನ್ನು ತಾವು ಪ್ರಾಮಾಣಿಕತನದಿಂದ ಕಲೆಕ್ಟ್ ಮಾಡಿದ್ದೀರಿ. ನಮ್ಮ ರಿಪೋರ್ಟ್ ಪ್ರಕಾರ ಇನ್ನೂ 5 ಕೋಟಿ ಬರಬೇಕು. ಪ್ರತಿಯೊಂದು ಕಾಲೇಜಿನವರಿಂದ ಬರತಕ್ಕಂಥ ಹಣವನ್ನು ಕೂಡ ನೀವು ಕಲೆಕ್ಟ್ ಮಾಡುವುದಕ್ಕೆ ತಯಾರಿಲ್ಲ. ಸರ್ಕಾರದಿಂದ ಹಣವನ್ನು ಕೂಡ ಒದಗಿಸುವುದಕ್ಕೂ ತಯಾರಿಲ್ಲ. You say, `we will close your hospital' ಎಂದು ಆಗ ಅವರು ಕೊಡುತ್ತಾರೆ. 24 ಗಂಟೆಯೊಳಗೆ ಅವರು ಹಣ ಕೊಡುತ್ತಾರೆ, ಅವರು ವಂತಿಗೆ ಮಾಡುತ್ತಾರೆ. ಅದನ್ನು ಕೇಳುವಷ್ಟು ಇವರಲ್ಲಿ ವ್ಯವಧಾನ ಇಲ್ಲ; ಮನಸ್ಸು ಇಲ್ಲ. ಆಸ್ಪತ್ರೆಗಳಲ್ಲಿ ಟಾರ್ಚ್, ಥರ್ಮಾಮೀಟರ್, ಸೆಕ್ಷನ್ ಆಪರೇಟರ್ಸ್ ಇಂಥಾದ್ದನ್ನು ಕೊಂಡುಕೊಳ್ಳಬಹುದು ಅಥವಾ ಎಲ್ಲಿ ನೀರು ಸರಬರಾಜಿನ ಕೊರತೆ ಇದೆ, ಆ ನೀರು ಸರಬರಾಜನ್ನು ಚೆನ್ನಾಗಿ ಒದಗಿಸಬಹುದು. ಗುಲ್ಬರ್ಗಾ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಇವತ್ತಿಗೂ ನೀರಿನ ತೊಂದರೆ ಇದೆ. ಸುಮಾರು 5 ಕೋಟಿ ರೂಪಾಯಿ ಸರ್ಕಾರಕ್ಕೆ ತೆಗೆದು ಕೊಳ್ಳಬಹುದು. ಅದಕ್ಕೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಮೆಡಿಕಲ್ ಕಾಲೇಜುಗಳಿಗೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ, ಅಲ್ಲಿ ಫೀ ಕೂಡ ಹೆಚ್ಚು ಕಲೆಕ್ಟ್ ಮಾಡಬೇಕಾಗುತ್ತದೆ. ಆದರೆ, ನೀವೇನು ಮಾಡಿದ್ದೀರಿ. 50 ವರ್ಷಗಳ ಹಿಂದೆ ಏನು ನಿಗದಿ ಮಾಡಿದ್ದರು, ಅದನ್ನೇ ನೀವು ಇಟ್ಟಿದ್ದೀರಿ. ವೆಸ್ಟರ್ನ್ ದೇಶಗಳಲ್ಲಿ ಅಥವಾ ಯಾವುದಾದರೂ ಮುಂದುವರೆದ ದೇಶಗಳಲ್ಲಿ ವರ್ಷಕ್ಕೆ, ಪ್ರತಿ ವಿದ್ಯಾರ್ಥಿಗೆ, 22 ಲಕ್ಷ ಫೀ ಕಲೆಕ್ಟ್ ಮಾಡುತ್ತಾರೆ. ಇನ್ ಟರ್ಮ್ಸ್ ಆಫ್ ರುಪೀಸ್ ಒಂದು ವರ್ಷಕ್ಕೆ 60 ಸಾವಿರ ಆಗುತ್ತದೆ. 60 ಸಾವಿರ ಕೊಡತಕ್ಕಂಥ ಆರ್ಥಿಕ ಮಟ್ಟದ ವಿದ್ಯಾರ್ಥಿಗಳು ನಮ್ಮಲ್ಲಿ ಇಲ್ಲ. ಕನಿಷ್ಟ ಈಗ 400 ರೂಪಾಯಿ ತೆಗೆದುಕೊಳ್ಳುತ್ತಿದ್ದೀರಿ, ಅದನ್ನು ಡಬಲ್ ಮಾಡಿ. ಎಂಟುನೂರು ರೂಪಾಯಿಗಳನ್ನಾದರೂ ಮಾಡಿ. 800 ರೂಪಾಯಿ ಏನೂ ಜಾಸ್ತಿ ಅಲ್ಲ. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಲೋಕಲ್ ಜನಗಳಿಂದ ಸ್ವಲ್ಪ ಫಂಡ್ ಕಲೆಕ್ಟ್ ಮಾಡಿದರೆ, ಮೂಲಭೂತ ಉಪಕರಣಗಳಾದ ಥರ್ಮಾಮೀಟರ್, ಟಾರ್ಚ್ ಇಂತಹ ಸಿಂಪಲ್ ಇನ್‌ಸ್ಟ್ರುಮೆಂಟ್ಸನ್ನು ತಾವು ತೆಗೆದುಕೊಳ್ಳಬಹುದು. ಪೂರ್ಣವಾಗಿ ಎಲ್ಲಾ ಸವಲತ್ತುಗಳನ್ನು ಒದಗಿಸುವುದಕ್ಕಾಗದೇ ಇದ್ದರೂ, ಅಲ್ಪಸ್ವಲ್ಪ ತಾವು ಹಣವನ್ನು ಸಂಗ್ರಹಣೆ ಮಾಡಿ, ಆಸ್ಪತ್ರೆಗಳಿಗೆ ಬೇಕಾಗತಕ್ಕಂಥ ಮೂಲಭೂತ ಸೌಲಭ್ಯಗಳನ್ನು ಈ ಮುಖಾಂತರ ಕೊಡುವುದಕ್ಕೆ ಮುಂದಾಗಬೇಕೆಂದು ತಿಳಿದುಕೊಂಡು, ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಹೊಸದಾಗಿ ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ, ಹಿಂದಿನ ಮುಖ್ಯಮಂತ್ರಿಗಳು ದೇವೇಗೌಡರು, ಯಾರು ಇವತ್ತು ದೇಶದ ಪ್ರಧಾನ

ಮಂತ್ರಿಗಳಾಗಿದ್ದಾರೆ, ಅವರು ಒಂದು ಸ್ಟೇಟ್‌ಮೆಂಟ್ ಕೊಟ್ಟರು. ಮತ್ತು ಈ ಸದನ ದಲ್ಲೂ ಕೂಡ ಬಾರಿ ಬಾರಿ ಹೇಳಿದರು. ಅದೇನೆಂದರೆ, ಬಡ ಜನರಿಗೆ ದೊಡ್ಡ ದೊಡ್ಡ ಖಾಯಿಲೆಗಳು ಬಂದಾಗ, ಗಂಡಾಂತರ ರೋಗಗಳು ಬಂದಾಗ ಅವರಿಗೆ ಉಚಿತ ಚಿಕಿತ್ಸೆಗಾಗಿ ನಾನು ಒಂದು ನೂರೂ ಕೋಟಿ ರೂಪಾಯಿಗಳನ್ನು ತೆಗೆದಿಡು ತ್ತೇನೆಂದು ಹೇಳಿದ್ದರು. ಒಂದು ಕಾರ್ಪಸ್ ಆಗಿ ತೆಗೆದಿಟ್ಟು, ಅದರ ಬಡ್ಡಿಯಿಂದ ಬರತಕ್ಕಂಥಾದ್ದು ಅಥವಾ ದಾನಿಗಳಿಂದ ಬರತಕ್ಕಂಥಾ ಹಣವನ್ನು ಒಂದುಗೂಡಿಸಿ ಒದಗಿಸುವುದಾಗಿ ಹೇಳಿದ್ದರು. ಇವತ್ತು ನಮ್ಮಲ್ಲಿ ಸೂಪರ್-ಸ್ಪೆಷಾಲಿಟಿ ಎಂದು 5 ಸಂಸ್ಥೆಗಳು ಇವೆ. ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ.....

ಶ್ರೀ ಧರ್ಮಸಿಂಗ್ :– ಹಿಂದಿನ ಮುಖ್ಯಮಂತ್ರಿಗಳು ಹಾಗೂ ಈಗಿನ ಪ್ರಧಾನಿಗಳು ಆದ ದೇವೇಗೌಡರು ಎಲ್ಲಾ ಕಡೆ ಬಡವರಿಗೆ ಒಂದು ನೂರು ಕೋಟಿ ರೂಪಾಯಿಗಳನ್ನು ಪುಕ್ಕಟೆ ಚಿಕಿತ್ಸೆಗಾಗಿ ಇಟ್ಟಿದ್ದೇವೆಂದು ಹೇಳಿರುವುದನ್ನು ಪ್ರಸ್ತಾಪ ಮಾಡಿದ್ದಾರೆ. ಈಗ ಹಣಕಾಸಿನ ಮಂತ್ರಿಗಳೂ ಕೂಡ ಬಂದಿದ್ದೀರಿ. ನಾನು ಹೇಳು ವುದೇನೆಂದರೆ, ತಮಾಶೆಗಾಗಿಯೋ ಅಥವಾ ಸತ್ಯವೇ ಇರಬಹುದು. ಚುನಾವಣೆಗೋಸ್ಕರ ಆ ತರಹ ಒಂದು ವಾಗ್ದಾನ ಮಾಡಿರಬಹುದು ಎಂದು.

ಶ್ರೀ ವಾಟಾಳ್ ನಾಗರಾಜ್ :– ಇವರು ಆಯವ್ಯಯವನ್ನು ಮಂಡಿಸುವಾಗ, ನೂರು ಕೋಟಿ ರೂಪಾಯಿಗಳನ್ನು ಬಡ ಜನರ ಆರೋಗ್ಯ ತಪಾಸಣೆ ಮಾಡುವುದಕ್ಕೆ ಇಟ್ಟಿದ್ದೇವೆಂಬುದನ್ನು ಸ್ಪಷ್ಟಪಡಿಸಿದರು.

ಶ್ರೀ ಬಿ. ಎಸ್. ಯಡಿಯೂರಪ್ಪ :– ಯಾರಿಗೂ ಆರೋಗ್ಯ ಕೆಟ್ಟಿಲ್ಲವಲ್ಲ. ಎಲ್ಲಾ ಬಡವರೂ ಆರೋಗ್ಯವಂತರಾಗಿರಬೇಕಾಗದರೆ, ಆ ದುಡ್ಡನ್ನು ತೆಗೆದಿಟ್ಟು ಯಾವ ರೀತಿ ಖರ್ಚುಮಾಡಬೇಕು?

ಶ್ರೀ ಧರ್ಮಸಿಂಗ್ :– ಪ್ರಾವಿಷನ್ ಕೂಡ ಮಾಡಬೇಕು, ಕೆಲಸವೂ ಪ್ರಾರಂಭವಾಗಬೇಕಲ್ಲ. ನಿಮ್ಮ ಹೇಳಿಕೆಯೂ ಕೂಡ ಕಾರ್ಯಗತದಲ್ಲಿ ಆಗಬೇಕು, ಆದರೆ ಈಗ ಎಲ್ಲಿ ಆಗಿದೆ?

ಶ್ರೀ ವಾಟಾಳ್ ನಾಗರಾಜ್ :– ಈ ವರ್ಷವೂ ಹೇಳಿದ್ದೀರಿ, ಆ ಕಾರ್ಯ ಕ್ರಮ ಏನು? 100 ಕೋಟಿ ರೂಪಾಯಿಗಳಲ್ಲಿ ಹೊರಗಡೆಯಿಂದ ಎಷ್ಟು ಹಣ ಬಂದಿದೆ? ಎಷ್ಟು ವಂತಿಕೆ ತಾವು ತೆಗೆದುಕೊಂಡಿದ್ದೀರಿ? ಈ ಕಾರ್ಯಕ್ರಮದಲ್ಲಿ ಏನೇನು ಮಾಡಿದ್ದೀರಿ? ಎಂಬ ಬಗ್ಗೆ ಸ್ವಲ್ಪ ಹಣಕಾಸಿನ ಸಚಿವರು ಹೇಳಬೇಕು.

ಶ್ರೀ ಸಿದ್ಧರಾಮಯ್ಯ :– ಬಜೆಟ್‌ನಲ್ಲಿ ಆರೋಗ್ಯ ನಿಧಿಯನ್ನು ಸ್ಥಾಪನೆ ಮಾಡಿ ಯಾರು ಬಡವರಿದ್ದಾರೆ, ಅವರಿಗೆ ಹೆಚ್ಚಿನ ಖಾಯಿಲೆಗಳು ಬಂದಾಗ, ಆ ದುಬಾರಿ

ವೆಚ್ಚವನ್ನು ಭರಿಸುವುದಕ್ಕೆ ಸಾಧ್ಯವಿಲ್ಲದೇ ಇರತಕ್ಕಜನರಿಗೆ ಸಹಾಯ ಮಾಡಬೇಕೆಂಬ ಕಾರಣಕ್ಕೋಸ್ಕರವಾಗಿ ಆರೋಗ್ಯ ನಿಧಿಯಿಂದ ಅವರ ಖರ್ಚು ಭರಿಸಬೇಕೆನ್ನುವ ಕಾರಣ ಕ್ಕೋಸ್ಕರ ಈ ನಿಧಿಯನ್ನು ಸ್ಥಾಪನೆ ಮಾಡಬೇಕೆಂದು ಸರ್ಕಾರ ಉದ್ದೇಶ ಇಟ್ಟುಕೊಂಡು ರಾಜ್ಯ ಸರ್ಕಾರ ಇದರಲ್ಲಿ 10 ಕೋಟಿ ಇಡುವುದು ಉಳಿದ 90 ಕೋಟಿಯನ್ನು ಸಾರ್ವಜನಿಕರಿಂದ ಬೇರೆ ಬೇರೆ ದಾನಿಗಳಿಂದ ವಸೂಲ್ಮಾಡಿ, ಆದರಲ್ಲಿ ಬರತಕ್ಕ ಬಡ್ಡಿ ಹಣದಿಂದ ಈ ಜನರಿಗೆ ಸಹಾಯ ಮಾಡಬೇಕೆನ್ನುವುದು. ಇದಕ್ಕೆ ನಾವು 2-3 ಸಭೆಗಳನ್ನು ಕೂಡ ಕರೆದಿದ್ದೇವೆ. ಜನಗಳಿಂದ ವಂತಿಗೆ ಕಲೆಕ್ಟ್ ಮಾಡುವುದಕ್ಕೆ. ದಾನ ಮಾಡುವವರು, ನಾವು ಕೊಡತಕ್ಕ ಹಣಕ್ಕೆ ಇನ್‌ಕಮ್ ಟ್ಯಾಕ್ಸ್ ವಿನಾಯಿತಿ ಕೊಡಬೇಕೆಂಬ ಪ್ರಶ್ನೆ ಇಟ್ಟಿದ್ದರು. ನಾವು ಕೇಂದ್ರ ಸರ್ಕಾರದ ಜೊತೆ ಮಾತನಾಡಿದೆವು. ಡಾ : ಮನಮೋಹನ್‌ಸಿಂಗ್‌ರವರು ಆರ್ಥಿಕ ಮಂತ್ರಿಯಾಗಿದ್ದಾಗ ಇದಕ್ಕೆ ಮತ್ತು ರಾಷ್ಟ್ರೀಯ ಕ್ರೀಡೆಗಳು ಇದಕ್ಕೆ ವಂತಿಗೆ ಕೊಡತಕ್ಕಂಥವರಿಗೆ ಇನ್‌ಕಮ್ ಟ್ಯಾಕ್ಸ್‌ನ್ನು ವಿನಾಯಿತಿ ಮಾಡಿಕೊಡಿ ಎಂದು ಪತ್ರವ್ಯವಹಾರ ಮಾಡಿದೆವು. ಆದರೆ, ಅವರು ವಿನಾಯಿತಿ ಕೊಡಲಿಕ್ಕೆ ಒಪ್ಪಲಿಲ್ಲ. ಈ ತಂಡ ಬೇರೆ ರಾಜ್ಯಗಳಿಂದಲೂ ಬರುತ್ತದೆ, ಎಲ್ಲಾ ಕಡೆಗೂ ಕೊಡಬೇಕಾಗುತ್ತದೆ. ಆದ್ದರಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಮೊನ್ನೆ ಶ್ರೀಮಾನ್ ದೇವೇಗೌಡರು ಮಂಡಿಸಿದಂಥ ಬಜೆಟ್‌ನಲ್ಲಿ ಇನ್‌ಕಮ್ ಟ್ಯಾಕ್ಸ್ ವಿನಾಯಿತಿ ಕೊಡುತ್ತೇವೆಂದು ಹೇಳಿದ್ದಾರೆ. ಮತ್ತು ಏನು ಈ ಆರೋಗ್ಯ ನಿಧಿ ಸ್ಥಾಪನೆ ಮಾಡುತ್ತೇವೆ. ಇದಕ್ಕೆ ಕೇಂದ್ರ ಸರ್ಕಾರದಿಂದಲೂ ವಂತಿಕೆಗೆ ಕೊಡುತ್ತೇವೆಂದು ಹೇಳಿದ್ದಾರೆ. ಅದನ್ನು ಉಪಯೋಗಿಸಿಕೊಂಡು ಈ ಆರೋಗ್ಯ ನಿಧಿಯನ್ನು ಸ್ಥಾಪನೆ ಮಾಡುತ್ತೇವೆ. ಆ ಮೂಲಕ ಬಡವರಿಗೆ ಸಹಾಯ ಮಾಡತಕ್ಕಂಥ ಕೆಲಸವನ್ನು ರಾಜ್ಯಸರ್ಕಾರ ಮಾಡುತ್ತದೆ ಎಂದು ಹೇಳು ವುದಕ್ಕೆ ಬಯಸುತ್ತೇನೆ. ಇದು ಚುನಾವಣೆಗೋಸ್ಕರ ಮಾಡತಕ್ಕಂತಾದ್ದು ಅಲ್ಲ, ಸ್ಟಂಟ್ ಮಾಡಬೇಕೆನ್ನುವುದೂ ಅಲ್ಲ, ವೋಟಿಗೋಸ್ಕರ ಮಾಡತಕ್ಕಂಥಾದ್ದು ಅಲ್ಲವೇ ಅಲ್ಲ.

ಒಬ್ಬ ಮಾನ್ಯ ಸದಸ್ಯರು :- ಅಂತು ನೀವು ನೂರು ಕೋಟಿ ಆರೋಗ್ಯ ನಿಧಿ ಮಾಡಿ ಇಟ್ಟಿಲ್ಲ.

ಶ್ರೀ ಸಿದ್ಧರಾಮಯ್ಯ :- ಇಲ್ಲ ಎಂದು ಹೇಳಲಿಲ್ಲವೇ, ಮಾಡುತ್ತೇವೆ.

ಡಾ : ಎ. ಬಿ. ಮಾಲಕ ರೆಡ್ಡಿ :- ಹಿಂದಿನ ಮುಖ್ಯಮಂತ್ರಿಗಳಾದ ದೇವೇಗೌಡರು ನೂರು ಕೋಟಿ ರೂಪಾಯಿಗಳನ್ನು ಈ ಸರ್ಕಾರ ತೆಗೆದಿಡುತ್ತದೆಂದು ಹೇಳಿದ್ದರು. ಈಗ ತಾವು ವಿಶ್ಲೇಷಣೆ ಮಾಡಿ ಹೇಳದ್ದೀರಿ, ಸಂತೋಷ. ನಾವು 10 ಕೋಟಿ ಇನ್ನುಳಿದ 90 ಕೋಟಿ ಬೇರೆ ಬೇರೆ ಕಡೆಗಳಿಂದ ಎಂದು ಹೇಳಿದಿರಿ. ಈ ರೀತಿ ಅವರು ಹೇಳಿರಲಿಲ್ಲ. ಅವರು ನೂರು ಕೋಟಿ ರೂಪಾಯಿಗಳನ್ನು ಕಾರ್ಪಸ್ ಮೇಲೆ ಇಡುತ್ತೇವೆಂದು ಹೇಳಿದ್ದರು. ಚುನಾವಣೆ ಸಲುವಾಗಿ ನಾವು ಕೋಟ್ಯಾಂತರ

ರೂಪಾಯಿ ಖರ್ಚುಮಾಡಿತ್ತೇವೆ, ಸಂಗ್ರಹಣೆ ಆಗುತ್ತದೆ. ಆದರೆ, ಇದಕ್ಕೆ ಸಂಗ್ರಹಣೆ ಆಗುವುದಿಲ್ಲ, ಏನು ಮಾಡುವುದು. ಇಂತಹ ಪರೋಪಕಾರಕ್ಕೆ ಹಣ ಸಂಗ್ರಹಣೆ ಯಾಗುವುದಿಲ್ಲ, ಆದರೆ, ಚುನಾವಣೆಗೆ ಕೋಟ್ಯಾಂತರ ರೂಪಾಯಿ ನಾವು ಸಂಗ್ರಹಣೆ ಮಾಡುತ್ತೇವೆ ಯಾವರೀತಿ ಸಂಗ್ರಹಣೆ ಮಾಡಬೇಕೋ ಮಾಡುತ್ತೇವೆ, ಇರಲಿ. ಆದರೆ ನಾನು ಹೇಳುವುದೇನೆಂದರೆ, ಆ ಕಾರ್ಪಸ್ ಮನಿ ನೂರು ಕೋಟಿ ಬಿಡಿ. ಈಗ ನಮ್ಮ ಸ್ವಾಯುತ್ತ ಸಂಸ್ಥೆಗಳ ಉದ್ದೇಶ ಏನು? ಸರ್ಕಾರದ ಕೆಂಪು ಪಟ್ಟಿಯಿಂದ ಬಿಡುಗಡೆ ಮಾಡಬೇಕು. ಎರಡನೆಯದು, ದಾನಿಗಳಿಂದ, ವ್ಯಕ್ತಿಗಳಿಂದ, ಟ್ರಸ್ಟ್‌ಗಳಿಂದ, ರಾಷ್ಟ್ರೀಯ ಅಂತರ್ ರಾಷ್ಟ್ರೀಯ ಸಂಘ ಸಂಸ್ಥೆಗಳಿಂದ ವಂತಿಗೆ ಪಡೆಯಲು ಅನುಕೂಲವಾಗುವುದು. ಕಾರಣ ಇಷ್ಟೆ. ಸರ್ಕಾರದಿಂದ ನಡೆಯತಕ್ಕ ಸಂಸ್ಥೆಗಳು ಅಷ್ಟು ಸಮರ್ಪಕವಾಗಿ ಮತ್ತು ಸಮರ್ಥ ರೀತಿಯಲ್ಲಿ ಕೆಲಸ ಮಾಡುವುದಿಲ್ಲ. ಸರ್ಕಾರೇತರ ಸಂಸ್ಥೆಗಳು ಅತ್ಯಂತ ಚುರುಕಾಗಿ ಕೆಲಸ ಮಾಡುತ್ತವೆ. ಆದಕ್ಕಾಗಿ, ಜನರಿಗೆ ಅವುಗಳಿಂದ ಸೇವೆ ಸಲ್ಲಲಿ ಎಂಬ ಉದ್ದೇಶದಿಂದ ದಾನಿಗಳು, ದಾನ ಕೊಡುತ್ತಾ ಇರುತ್ತಾರೆ. ವಂತಿಗೆಯನ್ನು ಸಲ್ಲಿಸುತ್ತಾ ಇರುತ್ತಾರೆ. ಈ 5 ಸಂಸ್ಥೆಗಳನ್ನು ತಾವು ಮಾಡಿ, ಆದಕ್ಕೆ ವಂತಿಗೆ ಪಡೆಯುವುದಕ್ಕೆ ದಾನಿಗಳಿಂದ ದಾನ ಪಡೆಯುವುದಕ್ಕೆ ಅನುಕೂಲವಾಗಲಿ ಎಂದು ತಿಳಿದುಕೊಂಡು ಎಲ್ಲದಕ್ಕೂ, ನಿಮ್ಹಾನ್ಸ್ ಒಂದು ಬಿಟ್ಟರೆ, ಅವಕ್ಕೆ ಯೂನಿಯನ್ ಹೆಲ್ತ್ ಮಿನಿಸ್ಟರ್ ಇದ್ದಾರೆ, ಅದೊಂದಕ್ಕೆ ಬಿಟ್ಟರೆ ಎಲ್ಲಕ್ಕೂ ಮುಖ್ಯಮಂತ್ರಿಗಳೇ ಅಧ್ಯಕ್ಷರಾಗಿದ್ದಾರೆ. ಇದರೊಳಗೆ ಮುಖ್ಯಮಂತ್ರಿಗಳು, ಆರ್ಥಿಕ ಮಂತ್ರಿಗಳೂ ಇದ್ದಾರೆ. ಯಾವರೀತಿಯ ಸಭೆ ಸಮ್ಮೇಳನಗಳನ್ನು ನಡೆಸಿ, ದಾನಿಗಳಿಂದ ಶೇಖರಣೆ ಮಾಡಿ ಅವರು ಬಿಸಿನೆಸ್ ಜನ ಆಗಿರಬಹುದು, ಕೈಗಾರಿಕೋದ್ಯಮಿಗಳಾಗಿರಬಹುದು ಮರ್ಚೆಂಟ್ಸ್ ಆಗಿರಬಹುದು, ಅಥವಾ ಶ್ರೀಮಂತರು ಹೀಗೆ ಯಾರು ಯಾರನ್ನೋ ಕೂಡಿಸಿ, ಈ ರೀತಿಯ ಪ್ರಯತ್ನ ಮಾಡಿದ್ದಾರೆಯೇ? ನೀವು ಎಷ್ಟು ಹಣ ಸಂಗ್ರಹಣೆ ಮಾಡಿದ್ದೀರಿ. ಆದನ್ನು ಹೇಳಬೇಕು. ಬರೀ ಹೆಲ್ತ್ ಮಿನಿಸ್ಟರನ್ನು ಮಾಡಿದರೆ ಆಗುವುದಿಲ್ಲ. ಆರ್ಥಿಕ ಮಂತ್ರಿಗಳನ್ನು ಮಾಡಬೇಕು ಅಥವಾ ಮುಖ್ಯಮಂತ್ರಿಗಳನ್ನು ಮಾಡಬೇಕು. ಆದಕ್ಕಾಗಿಯೇ ಅವರನ್ನು ಅಧ್ಯಕ್ಷರನ್ನಾಗಿ ಮಾಡಿರುವುದು. ಆದರೆ, ಮುಖ್ಯಮಂತ್ರಿಗಳಿಗೆ ಸಮಯ ಇರುವುದಿಲ್ಲ, ಅವರಿಗೆ ಬಿಡುವು ಇರುವುದಿಲ್ಲ. ಮುಖ್ಯಮಂತ್ರಿಗಳ ದೈನಂದಿನ ವ್ಯವಹಾರ ನಡೆಸುವುದಕ್ಕೇ ಅವರಿಗೆ ಬಿಡುವು ಇರುವುದಿಲ್ಲ. ಮುಖ್ಯಮಂತ್ರಿಗಳ ದೈನಂದಿನ ವ್ಯವಹಾರ ನಡೆಸುವುದಕ್ಕೇ ಅವರಿಗೆ ಬಿಡುವು ಇರುವುದಿಲ್ಲ. ಇನ್ನು 4-5 ಆರೋಗ್ಯ ಸಂಸ್ಥೆಗಳನ್ನು ನೋಡಿಕೊಳ್ಳು ವುದಕ್ಕೆ ಅವರಿಗೆ ಎಲ್ಲಿ ಬಿಡುವು ಸಿಗುತ್ತವೆ? ಹೀಗಾಗಿ ಏನಾಗಿದೆ, ಇವು ಸರ್ಕಾರದ ಕಂಟ್ರೋಲ್‌ನಲ್ಲಿ ಇದ್ದರೆ ಈ ಸಂಸ್ಥೆಗಳು ಚೆನ್ನಾಗಿರುತ್ತಿದ್ದವು, ಈಗ ಅಟಾನಮಸ್ ಇರುವುದರಿಂದ ಇರತಕ್ಕ ಡೈರಕ್ಟರು ಏನೇನು ಹೇಳುತ್ತಾರೆ ಅದೇ ಕೆಲಸವಾಗುವುದು. ಈಗ ನಿಮಗೆ ಉದಾಹರಣೆ ಕೊಡಬೇಕಾದರೆ ಸಂಜಯಗಾಂಧಿ ಇನ್‌ಸ್ಟಿಟ್ಯೂಟ್ ಆಫ್ ಆಕ್ಸಿಡೆಂಟ್ ಅಂಡ್ ರಿಹ್ಯಾಬಿಲಿಟೇಷನ್ ತಾವು ನೋಡಿರಬೇಕು. ಅದು ಯಾವ ಪರಿಸ್ಥಿತಿಗೆ ಬಂದು ಮುಟ್ಟಿದೆ ಈಗ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಲಜಿ,

ಇದು ಉತ್ತಮವಾಗಿ ಕೆಲಸ ಮಾಡುತ್ತಿದೆ. ನಿಮ್ಹಾನ್ಸ್ ಉತ್ತಮವಾಗಿ ಕೆಲಸ ಮಾಡುತ್ತಿದೆ, ಕಿದ್ವಾಯಿ ಉತ್ತಮವಾಗಿ ಕೆಲಸ ಮಾಡುತ್ತಿದೆ. ಹೀಗೆ ಉತ್ತಮವಾಗಿ ಕೆಲಸ ಮಾಡುವುದರಿಂದ ಈಗ ಏನು ಪರಿಸ್ಥಿತಿ ಆಗಿದೆ ಅಂದ್ರೇ ಸೂಪರ್ ಸ್ಪೆಷಲಿಟಿ ಆಸ್ಪತ್ರೆಗಳು ಜನರಲ್ ಆಸ್ಪತ್ರೆಗಳಿಗಿಂತಲೂ ಅವುಗಳ ಪರಿಸ್ಥಿತಿ ಕೀಳಾಗಿವೆ. ಅಷ್ಟು ಜನಸಂದಣಿ ಹೆಚ್ಚಾಗಿವೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕೋ ಬೇಡವೋ? ನಾವು ಬಡವರಿಗೆ ನೂರು ಕೋಟಿ ರೂಪಾಯಿಗಳನ್ನು ಇಟ್ಟು ಸಹಾಯ ಅಲ್ಲೇ ಮಾಡೋಣ ಈಗ ಸಧ್ಯ. ಅಲ್ಲಿ ಬಡವರಿಗೆ ಎಲ್ಲಿ ಸಹಾಯವಾಗುತ್ತಿದೆ ಸ್ವಾಮಿ? ಅಲ್ಲಿ ಸುಮಾರು 40-50 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಫ್ರೀ ಆಗಿ ಇಲ್ಲ. ತಾವು ಮುಖ್ಯಮಂತ್ರಿಗಳ ಫಂಡ್‌ನಿಂದ ಕೊಡುತ್ತೀರಿ ಆದರೆ ಸಂಪೂರ್ಣವಾಗಿ ಕೊಡುವುದಿಲ್ಲ. ನಾನೂ ಸಹ ಆರೋಗ್ಯ ಮಂತ್ರಿಯಾಗಿ ಕೆಲಸ ಮಾಡಿರುವುದರಿಂದ ನನಗೆ ಗೊತ್ತಿದೆ. ಎಂಥ ಕಡು ಬಡವನಾದರೂ ಸಹ 20-30 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ ಅವನು ಎಲ್ಲಿಂದ ತರುವುದು? ಅದಕ್ಕೆ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈಗ ಜಯದೇವ ಹೃದ್ರೋಗ ಕೇಂದ್ರಕ್ಕೆ ಬಿಲ್ಡಿಂಗ್ ಸಾಕಾಗುವುದಿಲ್ಲ. ಬೇರೆ ಬಿಲ್ಡಿಂಗ್ ಏನು ಕಟ್ಟಿಸುತ್ತಿದ್ದಾರೆ ಅದಕ್ಕೆ 10 ಕೋಟಿ ರೂಪಾಯಿಗಳು ಬೇಕಾಗಿದೆ. ಈಗಾಗಲೇ ಬಿಲ್ಡಿಂಗ್ ಫಸ್ಟ್ ಸ್ಟೇಜ್ ಪೂರ್ಣವಾಗುವ ಹಂತದಲ್ಲಿದೆ. ಅಲ್ಲಿಗೆ ಹಣ ಬಿಡುಗಡೆಯಾಗುತ್ತಿಲ್ಲ ಕೆಲಸ ಪ್ರೋಗ್ರೇಸ್‌ನಲ್ಲಿ ಇಲ್ಲ. ಕಂಟ್ರಾಕ್ಟರ್‌ಗೆ ಹಣ ಕೊಟ್ಟರೆ ತಾನೇ ಅವನು ಕೆಲಸ ಮುಂದುವರಿಸುವುದು. ಅದಕ್ಕೆ ದಯಮಾಡಿ ತಾವು ಏನು ಮೊದಲನೆಯ ಹಂತಕ್ಕೆ 10 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿದೆ ಅದಕ್ಕೆ ತಕ್ಷಣ ಹಣ ಬಿಡುಗಡೆ ಮಾಡಿ. ಆಗ ಆಸ್ಪತ್ರೆ ತಯಾರಾಗುತ್ತದೆ. ಶ್ರೀಮಂತರ ಜೊತೆಗೆ 50 ಪರ್ಸೆಂಟ್ ಬಡವರಿಗೂ ಸಹಾಯವಾಗುತ್ತದೆ. ತಕ್ಷಣ ಹಳೆ ಬಿಲ್ಡಿಂಗ್ ನಿಂದ ಹೊಸ ಬಿಲ್ಡಿಂಗ್‌ಗೆ ಶಿಫ್ಟ್ ಮಾಡತಕ್ಕಂಥ ಒಂದು ವ್ಯವಸ್ಥೆ ಮಾಡಿ. ಉತ್ತಮವಾದ ಚಿಕಿತ್ಸೆ ಸಿಗುತ್ತದೆ ಬಡವರಿಗೂ ಅನುಕೂಲವಾಗುತ್ತದೆ ಇನ್ನು ಕಿದ್ವಾಯಿ ಸುಮಾರು 10 ವರ್ಷಗಳಿಂದ.....

ಉಪಾಧ್ಯಕ್ಷರು :- ತಮಗೆ ಇನ್ನೂ ಎಷ್ಟು ಸಮಯ ಬೇಕಾಗುತ್ತದೆ? ಈಗಾಗಲೇ 75-80 ನಿಮಿಷ ಮಾತನಾಡಿದ್ದೀರಿ.

ಡಾ : ಎ. ಬಿ. ಮಲಕರೆಡ್ಡಿ :- ಇನ್ನು ಒಂದು 10 ನಿಮಿಷ.

ಶ್ರೀ ಧರ್ಮ ಸಿಂಗ್ :- ಮಾನ್ಯ ಅಧ್ಯಕ್ಷರೇ ಅವರು ವಿಷಯದ ಮೇಲೆ ಮಾತನಾಡುತ್ತಿದ್ದಾರೆ. ಅವರಿಗೆ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಡಿ ನಮ್ಮಲ್ಲಿ ಒಬ್ಬಿಬ್ಬರು ಸದಸ್ಯರಿಗೆ ಅವಕಾಶ ಇಲ್ಲದಿದ್ದರೂ ಪರವಾಗಿಲ್ಲ.

ಉಪಾಧ್ಯಕ್ಷರು :- ನಾನು ಇನ್ನೂ ಅವರಿಗೆ ಎಷ್ಟು ಸಮಯ ಬೇಕಾಗುತ್ತದೆ ಎಂದು ಕೇಳಿದೆ ಅಷ್ಟೇ.

ಶ್ರೀ ಎ. ಬಿ. ಮಲಕರೆಡ್ಡಿ :- ಈಗ ಕಿದ್ವಾಯಿಯಲ್ಲಿ ಅವರು ಸಹ ಉತ್ತಮವಾದ ಕೆಲಸ ಮಾಡುತ್ತಿದ್ದಾರೆ. ನಾನು ಅಲ್ಲಿಗೆ ಒಮ್ಮೆ ಸಂದರ್ಶನ ಕೊಟ್ಟಾಗ ಅಲ್ಲಿರತಕ್ಕಂಥ ಉಪಕರಣಗಳು ಚೆನ್ನಾಗಿವೆ ಎಂದು ಹೇಳುತ್ತಿದ್ದರು. ಈ ಉಪಕರಣಗಳನ್ನು ತೆಗೆದುಕೊಂಡು 10-15 ವರ್ಷಗಳಾಗಿವೆ ಇವು ಔಟ್ ಡೇಟೆಡ್ ಆಗುತ್ತಿವೆ. ನಾವು ಹೊಸ ಉಪಕರಣಗಳನ್ನು ಪರ್ಚೇಜ್ ಮಾಡಬೇಕಾದರೆ ಸುಮಾರು 3 ಕೋಟಿ ರೂಪಾಯಿಗಳು ಬೇಕಾಗಬಹುದು ಅಂತ ಹೇಳುತ್ತಿದ್ದರು. ಸರ್ಕಾರದ ಮುಂದೆ ಸಹ ಅವರು ಪ್ರಸ್ತಾವನೆಯನ್ನು ಇಟ್ಟಿದ್ದಾರೆ ಆದ್ದರಿಂದ ದಯಮಾಡಿ ಮಾನ್ಯ ಅರ್ಥಮಂತ್ರಿಗಳು ಹಣ ಬಿಡುಗಡೆ ಮಾಡಬೇಕು. ಇವತ್ತು ಕಿದ್ವಾಯಿ ಆಸ್ಪತ್ರೆ ಸಹ ಜನರಲ್ ಆಸ್ಪತ್ರೆ ಆದಂತೆ ಆಗಿದೆ. ಅಷ್ಟು ಜನಸಂದಣಿ ಇದೆ ಇವತ್ತು. ಇಡೀ ಕರ್ನಾಟಕ ರಾಜ್ಯದಲ್ಲಿ ಅಂತಹ ಚಿಕಿತ್ಸೆ ಕೊಡತಕ್ಕಂಥ ಆಸ್ಪತ್ರೆ ಅದು ಒಂದೇ ಒಂದು ಇದೆ. ಗುಲ್ಬರ್ಗ ಬೀದರ್ ಕಾರವಾರದಿಂದ ಜನರು ಅಲ್ಲಿಗೆ ಬರಬೇಕು. ಕರ್ನಾಟಕ ರಾಜ್ಯದಲ್ಲಿ ಇವತ್ತು 35 ಸಾವಿರ ಕ್ಯಾನ್ಸರ್ ರೋಗಿಗಳು ಇದ್ದಾರೆ. ಹುಬ್ಬಳ್ಳಿಯಲ್ಲಿ ಈಗಾಗಲೇ ಸರ್ಕಾರಿ ಒಂದು ಸಂಸ್ಥೆ ಇದೆ. ಕಿದ್ವಾಯಿಯಲ್ಲಿ ಯಾವ ರೀತಿ ಚಿಕಿತ್ಸೆ ಕೊಡುತ್ತಿದ್ದೀರಿ ಅಂತಹ ಒಂದು ಚಿಕಿತ್ಸೆಯನ್ನು ತಾವು ಹುಬ್ಬಳ್ಳಿಯ ಕೆ.ಎಂ.ಸಿ.ಯಲ್ಲಿ ಏಕೆ ಮಾಡುತ್ತಿಲ್ಲ. ಸುಮಾರು 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅಲ್ಲಿಗೆ ಬರತಕ್ಕಂಥ ಜನ ಸಂದಣಿ ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ಶ್ರೀಮಂತರು ಹಣ ಇದ್ದವರು ನಿಮ್ಮಲ್ಲಿ ಬರುವುದೇ ಇಲ್ಲ. ಅವರು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆಯನ್ನು ತೆಗೆದುಕೊಳ್ಳುತ್ತಿದ್ದಾರೆ. ನಿಮ್ಮ ಕಡೆ ಬರುವುದು ಕೇವಲ ಬಡವರೇ. ಬಡವರು ಇಲ್ಲಿಗೆ ಬರಬೇಕಾದರೆ ಸುಮಾರು 3-4 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಅದಕ್ಕೆ ಹುಬ್ಬಳ್ಳಿಯ ಕೆ.ಎಂ.ಸಿ. ಯಲ್ಲಿ ಒಂದು ಕೇಂದ್ರವನ್ನು ಮಾಡಿ ಆಡಳಿತ ವಿಕೇಂದ್ರಿಕರಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಅಲ್ಲಿ ಈಗಾಗಲೇ 2-3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೋಬಾಲ್ಟ್ ಉಪಕರಣವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅದಕ್ಕೆ ಬೇಸಿಕ್ ಇನ್‌ಫ್ರಾಸ್ಟ್ರಕ್ಚರ್ ಏನು ಬೇಕು ಅದನ್ನು ಪ್ರವೈಡ್ ಮಾಡಿ ಈ ಉತ್ತರ ಕರ್ನಾಟಕದಿಂದ ಮತ್ತು ವಿಶೇಷವಾಗಿ ಬಾಂಬೆ ಕರ್ನಾಟಕದಿಂದ ಬರತಕ್ಕಂಥ ಜನರಿಗೆ ಏನು ತೊಂದರೆ ಆಗಿದೆ ಆ ತೊಂದರೆಯಿಂದ ಅವರನ್ನು ಮುಕ್ತರನ್ನಾಗಿ ಮಾಡಬೇಕು. ಗುಲ್ಬರ್ಗದಲ್ಲಿ ಇದೆ. ಅದಕ್ಕೆ ಹೈದ್ರಾಬಾದ್, ಕರ್ನಾಟಕ ಶಿಕ್ಷಣ ಸಂಸ್ಥೆಯಿಂದ ಸಾಕಷ್ಟು ಹಣ ಕೊಟ್ಟಿದ್ದೇವೆ. ಅಲ್ಲೂ ಸಹ ಇದೆ. ಆದರೆ ಅಲ್ಲಿ ಯಾವ ಪ್ರಮಾಣದಲ್ಲಿ ಕೆಲಸ ಮಾಡಬೇಕೋ ಆ ಪ್ರಮಾಣದಲ್ಲಿ ಕೆಲಸ ಮಾಡುತ್ತಿಲ್ಲ. ಅದನ್ನು ಸಹ ಆಧುನೀಕರಣಗೊಳಿಸಿ ಉತ್ತಮವಾಗಿ ಕೆಲಸ ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಪ್ರತಿಯೊಂದು ಆಸ್ಪತ್ರೆಯಲ್ಲಿ ನಾನು ಈ ನಿರ್ಮಲೀಕರಣ ಮಾಡುವ ವಿಷಯದ ಬಗ್ಗೆ ಹೇಳುತ್ತಿದ್ದೆ ಈಗ ಬೋರಿಂಗ್ ಆಸ್ಪತ್ರೆ, ಅಲ್ಲಿ ನಮ್ಮ ಮಿತ್ರರೊಬ್ಬರು ಅಡ್ಮಿಟ್ ಆಗಿದ್ದರು ಅಲ್ಲಿಗೆ ನಾನು ಹೋಗಿದ್ದೆ, ಅವರಿಗೆ ಅಲ್ಲಿ

ಯಾವುದೋ ಒಂದು ಕಡೆಯ ರೂಮ್ ಕೊಟ್ಟಿದ್ದರು. ನಾನು ಕಿಟಿಕಿಯಿಂದ ಹೊರಗಡೆ ನೋಡಿದರೆ ಆ ಆಸ್ಪತ್ರೆ ಸುತ್ತಮುತ್ತ ಎಷ್ಟು ಹೊಲಸು ಇತ್ತು ಅಂದ್ರೆ ಆಗ ನಾನು ಅಲ್ಲಿನ ಸೂಪರಿನ್‌ಟೆಂಡೆಂಟ್ ಹತ್ತಿರ ಮಾತನಾಡಿದಾಗ ಅವರು ಕೇಳಿದರು ನಾನು ಸರ್ಕಾರಕ್ಕೆ ಹೇಳಿದ್ದೇನೆ, ಕಾರ್ಪೊರೇಷನ್ ವ್ಯಾನ್‌ಗೆ ಹೇಳಿ ಹೇಳಿ ಸಾಕಾಯಿತು ವ್ಯಾನ್ ಬರುತ್ತಿಲ್ಲ ಈ ಗಾರ್ಬೇಜ್ ಲಿಫ್ಟ್ ಮಾಡುತ್ತಿಲ್ಲ, ಇದರಿಂದ ನಮಗೆ ಸಾಕಾಗಿ ಹೋಗಿದೆ, ಅದಕ್ಕೆ ನಾವು ಸರ್ಕಾರಕ್ಕೆ ಒಂದು ಇನ್‌ಸಿನಿರೇಟರ್ ಬೇಕು ಅಂತ ಇಂಡೆಂಟ್ ಮಾಡಿದ್ದೇವೆ. ಪ್ರತಿಯೊಂದು ಆಸ್ಪತ್ರೆಯಲ್ಲಿ ಸಹ ಇನ್‌ಸಿನಿರೇಟರ್ ಅಂತ ಇರುತ್ತದೆ. ಅದು ಕಸಕಡ್ಡಿಯನ್ನು ಸುಟ್ಟು ಬೂದಿ ಮಾಡಿಬಿಡುತ್ತದೆ. ಪ್ರತಿಯೊಂದು ಆಸ್ಪತ್ರೆಯಲ್ಲಿ ಈ ಉಪಕರಣ ಬೇಕಾಗಿಲ್ಲ ಕಾರಣ ಅದು ಬಹಳ ಬೆಲೆ ಜಾಸ್ತಿ ಒಂದೊಂದು ಉಪಕರಣಕ್ಕೆ 50 ಲಕ್ಷ ರೂ.ಗಳು ಬೇಕಾಗುತ್ತದೆ. ಅದಕ್ಕೆ ತಾವು ಒಂದು ಸೆಂಟ್ರಲ್ ಇನ್‌ಸಿನಿರೇಟರ್ ಮಾಡಿ ಎಲ್ಲಾ ಆಸ್ಪತ್ರೆಗಳ ಕಸಕಡ್ಡಿಯನ್ನು ಒಂದು ವ್ಯಾನ್ ಮುಖಾಂತರ ಅಲ್ಲಿಗೆ ತಂದು ಅಲ್ಲಿ ಇನ್‌ಸಿನಿರೇಟರ್‌ನಲ್ಲಿ ಹಾಕಿ ಸುಟ್ಟುಬಿಡಬಹುದಲ್ಲ. ಈ ವ್ಯವಸ್ಥೆ ಏಕೆ ಮಾಡಿಲ್ಲ?

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಈಗಾಗಲೇ ಮಾಡಿದ್ದೇವೆ. ಇನ್ನು ಮೈಸೂರಿನಲ್ಲಿಯೂ ಸಹ ಒಂದು ಮಾಡಬೇಕೆಂದು ಇದ್ದೇವೆ.

ಡಾ : ಎ. ಬಿ. ಮಲಕರೆಡ್ಡಿ :- ತಾವು ಅಲ್ಲಿ ಸಣ್ಣದು ಮಾಡಿರಬಹುದು.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಮಾನ್ಯ ಅಧ್ಯಕ್ಷರೇ, ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಏನು ಮಾಡಿದ್ದಾರೆ ಅಂದರೆ ನರ್ಸಸ್ ಕ್ವಾಟ್ರಸ್ ಒಳಗೆ ಮಾಡಿಬಿಟ್ಟಿದ್ದಾರೆ. ಇದರಿಂದಾಗಿ ಅವರು ಅಲ್ಲಿ ವಾಸ ಮಾಡುವುದಕ್ಕೆ ಆಗುತ್ತಿಲ್ಲ. ಅಲ್ಲಿಗೆ ಬೋನ್ಸ್ ಎಲ್ಲಾ ತಂದು ಸುಟ್ಟು ಮಾಡಬಾರದು ಅಂತ ನಾವು ರಿಪೋರ್ಟ್ ಮಾಡಿದ್ದರೂ ಸಹ ಅಲ್ಲಿ ಪ್ರತಿಭಟನೆ ಮಾಡಿದ್ದರೂ ಸಹ, ಅಲ್ಲಿನ ಒಬ್ಬ ಮಹಿಳಾ ಡೈರೆಕ್ಟರ್ ಬಂದು ಹೇಳಿದ್ದರೂ ಸಹ ಮತ್ತು ಮಹಿಳೆಯರು ಎಲ್ಲಾ ಬಂದು ಧರಣಿ ಮಾಡಿದ್ದಾರೆ, ಅಲ್ಲಿ ಮಾಡಬೇಡಿ ಅಂತ ಹೇಳಿದ್ದರೂ ಕೂಡ ಅಲ್ಲಿಗೇ ತೆಗೆದುಕೊಂಡು ಬಂದು ಹಾಕಿದ್ದಾರೆ. ಅದನ್ನು ಬೇರೆ ಕಡೆ ಮಾಡಬೇಕೆಂದು ಎಲ್ಲಾ ಮಹಿಳೆಯರು ಹೇಳಿದ್ದರೂ ಸಹ ತಾವು ಅಲ್ಲೇ ಮಾಡಿದ್ದೀರಿ.

ಡಾ : ಎ. ಬಿ. ಮಲಕರೆಡ್ಡಿ :- ಮಾನ್ಯ ಅಧ್ಯಕ್ಷರೇ ಈಗ ನಾವು ಇಷ್ಟೆಲ್ಲಾ ಸೂಪರ್ ಸ್ಪೆಷಲಿಟಿ ಆಸ್ಪತ್ರೆಗಳನ್ನು ಸ್ಥಾಪನೆ ಮಾಡಿದರೂ ಕೂಡ ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಅಥವಾ ನಿಮ್ಹಾನ್ಸ್‌ನಲ್ಲಿ ನೀವು ಎಂ.ಆರ್.ಐ. ಉಪಕರಣವನ್ನು ಸ್ಥಾಪನೆ ಮಾಡುವುದಕ್ಕೆ ಆಗಿಲ್ಲ. ಇದಕ್ಕೆ ಕೇಂದ್ರ ಸರ್ಕಾರದವರು ಏನೋ ಹಣ ಕೊಡುತ್ತಿದ್ದಾರೆ.

ರಾಜ್ಯ ಸರ್ಕಾರದ ಕಡೆಯಿಂದ 40 ಪರ್ಸೆಂಟ್ ಹಣ ಏನು ಕೊಡಬೇಕು ಅದನ್ನು ಕೊಟ್ಟಿದ್ದೇ ಆದರೆ ಕೇಂದ್ರ ಸರ್ಕಾರದವರು ಅವರ ವಂತಿಗೆಯನ್ನು ಸಲ್ಲಿಸಿ ಈ ಉಪಕರಣವನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಈ ಉಪಕರಣದಿಂದ ಎಂತಹ ಕಾಂಪ್ಲಿಕೇಟೆಡ್ ಖಾಯಿಲೆಬಂದರೂ ಕೂಡ ಇದನ್ನು ಟೆಚಪ್ ಮಾಡತಕ್ಕಂಥ ಕೆಪ್ಯಾಸಿಟಿ ಈ ಉಪಕರಣದಲ್ಲಿದೆ ಅದಕ್ಕೆ ತಕ್ಷಣ ತಾವು ಅಲ್ಲಿಗೆ ಅದನ್ನು ಒದಗಿಸಬೇಕು. ಇವತ್ತು ಪ್ರೈವೇಟ್‌ನವರು ಮಣಿಪಾಲ ಆಸ್ಪತ್ರೆಯವರು ತಂದು ಇಟ್ಟಿದ್ದಾರೆ. ನಮ್ಮ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ಎಂಆರ್‌ಐ ಉಪಕರಣಕ್ಕೆ ತಾವು ತಕ್ಷಣ ಹಣ ಬಿಡುಗಡೆ ಮಾಡಿ ಆ ಉಪಕರಣವನ್ನು ಪರ್ಚೇಜ್ ಮಾಡುವುದಕ್ಕೆ ತಾವು ವ್ಯವಸ್ಥೆ ಮಾಡಬೇಕು. ಇಲ್ಲದಿದ್ದರೆ ಜನರು ಪ್ರೈವೇಟ್ ಆಸ್ಪತ್ರೆಗೆ ಹೋಗಬೇಕಾಗುತ್ತದೆ. ಮಣಿಪಾಲ್ ಆಸ್ಪತ್ರೆಯ ವರು ಸಹ 5-6 ತಿಂಗಳ ಹಿಂದೆಯಷ್ಟೇ ತಂದಿದ್ದಾರೆ. ಇಲ್ಲದಿದ್ದರೆ ನಾವು ಮದ್ರಾಸ್‌ಗೆ ಹೋಗಬೇಕು ಇಲ್ಲದಿದ್ದರೆ ನಾವು ಬಾಂಬೆಗೆ ಹೋಗಬೇಕು. ಅದಕ್ಕಾಗಿ ಇವತ್ತು ಬೆಂಗಳೂರಿನಂತಹ ಒಂದು ಮಹಾನಗರದಲ್ಲಿ ಸರ್ಕಾರಿ ಸಂಸ್ಥೆಯಲ್ಲಿ ಅಂತಹ ಒಂದು ಉಪಕರಣವನ್ನು ಪರ್ಚೇಜ್ ಮಾಡಿ ಆ ಸೌಲಭ್ಯವನ್ನು ಒದಗಿಸಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಸ್ವಾಯುತ್ತ ಸಂಸ್ಥೆ ಬಗ್ಗೆ ಮಾತನಾ ಡಬೇಕಾದರೆ ಈ ಸಂಜಯಗಾಂಧಿ ಆಕ್ಸಿಡೆಂಟ್ ಆಸ್ಪತ್ರೆ. ಈ ಸಂಸ್ಥೆಗೆ ಜರ್ಮನ್ ರಾಷ್ಟ್ರ ಕೂಡ ಈ ಭಾರತ ದೇಶದಲ್ಲಿ ಅಪಘಾತಕ್ಕೆ ಈಡಾದ ಜನರಿಗೆ ಚಿಕಿತ್ಸೆಗಾಗಿ ಸಾಕಷ್ಟು ಸಮರ್ಪಕವಾದ ವ್ಯವಸ್ಥೆ ಇಲ್ಲ ಅಂತ ತಿಳಿದುಕೊಂಡು ಅವರು ಕೋಟ್ಯಾಂತರ ರೂಪಾಯಿಗಳನ್ನು ನಮ್ಮ ಕರ್ನಾಟಕ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅಂದ್ರೆ ಇದು ಎಂತಹ ಮಹತ್ವವಾದ ವಿಷಯ ಎನ್ನುವುದನ್ನು ನಮ್ಮ ಸರ್ಕಾರಿ ಇನ್ನೂ ಅರ್ಥಮಾಡಿಕೊಂಡಿಲ್ಲ. ಅವರು ಏನು ಹಣ ಕೊಡುತ್ತಾರೆ ಅದನ್ನು ತಾವು ಬೇರೆ ಬೇರೆ ಕಡೆಗಳಲ್ಲಿ ಖರ್ಚು ಮಾಡಿ. ಬೆಂಗಳೂರಿನಲ್ಲಿಯೇ ಸ್ಥಾಪನೆಯಾದ ಸಂಜಯಗಾಂಧಿ ಆಸ್ಪತ್ರೆ ಅವರ ಹೆಸರಿನ ಮೇಲೆ ಏನು ಅಕ್ಸಿಡೆಂಟ್ ಮತ್ತು ಪುನರ್ವಸತಿ ಆಸ್ಪತ್ರೆ ನಡೆಯುತ್ತಿದೆ ಅವರ ಆಡಳಿತ ವ್ಯವಸ್ಥೆ ಎಷ್ಟು ಅಧೋಗತಿಗೆ ಇಳಿದಿದೆ ಎಂದರೆ ಯಾರಿಂದಲೂ ಅದರ ಬಗ್ಗೆ ಒಂದು ಒಳ್ಳೆಯ ಅಭಿಪ್ರಾಯ ಇಲ್ಲ. ಅಲ್ಲಿರತಕ್ಕಂಥ ನಿರ್ದೇಶಕರು 1992 ರಲ್ಲಿ ನೇಮಕ ಆದ ಮೇಲೆ ಅದರ ಆಡಳಿತ ವ್ಯವಸ್ಥೆ ಎಷ್ಟು ಅಧೋಗಿತಿಗೆ ಇಳಿದಿದೆ ಏನ್ನುವುದನ್ನು ನಾನು ಆರೋಗ್ಯ ಮಂತ್ರಿ ಇದ್ದಾಗ ವಿಚಾರಣೆ ಮಾಡಬೇಕೆಂದು ಆರ್ಡರ್ ಮಾಡಿದ್ದೇ ಅದೇ ಆರ್ಡರ್‌ನ್ನು ತಾವು ಮುಂದುವರಿಸಿದ್ದೀರಿ. ಅವರ ವರದಿ ಬಂದಿದೆ ಆದರೇ ಅವರು ಆ ವರದಿಯಲ್ಲಿ ಏನು ಹೇಳಿದ್ದಾರೋ ಅದು ಅಲ್ಲೇ ಉಳಿದುಕೊಂ ಡಿದೆ ಮುಂದಿನ ಕಾರ್ಯಕ್ರಮ ಷ್ಮಾತ್ರ ಜಾರಿ ಆಗಿಲ್ಲ. ಅದರ ಪರಿಣಾಮ ಏನಾಗಿದೆ ಅಂದ್ರೆ ಅಪಘಾತಕ್ಕೆ ಒಳಗಾದ ಜನರಿಗೆ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಮಗೆ ಹೇಳಬೇಕೆಂದರೆ ಅಪಘಾತಕ್ಕೆ ತುತ್ತಾದಾಗ ರಕ್ತಸ್ರಾವ ಹೆಚ್ಚು ಆಗುತ್ತದೆ. ಅಲ್ಲಿ ಒಂದು ಬ್ಲಡ್ ಬ್ಯಾಂಕ್ ಇದೆ. ನಾನು ಅಲ್ಲಗೆ ಜುಲೈ ತಿಂಗಳಲ್ಲಿ ಇನ್ಸ್‌ಪೆಕ್ಷನ್‌ಗೆ ಹೋಗಿದ್ದೆ. ಆ ಜುಲೈ ತಿಂಗಳಲ್ಲಿ 7 ಬಾಟಲ್ ಬ್ಲಡ್‌ನ್ನು ಅವರು ಕಲೆಕ್ಟ್

ಮಾಡಿದ್ದಾರೆ. ಮತ್ತು ಅಲ್ಲಿನ ಬ್ಲಡ್ ಬ್ಯಾಂಕ್ ಆಫೀಸರ್ ಅಲ್ಲಿನ ಟೆಕ್ನೀಷಿಯನ್ ಸಿಬ್ಬಂದಿ ವರ್ಗಕ್ಕೆ ನಾವು ಒಂದು ತಿಂಗಳಿಗೆ 30 ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ನಾವು ಪ್ರತಿ ತಿಂಗಳು ಅವರಿಗೆ 30 ಸಾವಿರ ರೂಪಾಯಿಗಳನ್ನು ಏನು ಖರ್ಚು ಮಾಡುತ್ತಿದ್ದೇವೆ ಅದರ ಬದಲು ಆ 30 ಸಾವಿರ ರೂಪಾಯಿಗಳಲ್ಲಿ ಬ್ಲಡ್‌ನ್ನು ಸಿಟಿಯಲ್ಲಿ ಪರ್ಚೇಜ್ ಮಾಡಬಹುದಲ್ಲ. ಆ ಬ್ಲಡ್‌ನ್ನು ರೋಗಿಗಳಿಗೆ ಕೊಡಬಹುದಲ್ಲ. ಒಂದು ದಿವಸಕ್ಕೆ ಅವರು 20-30 ಬಾಟಲ್ ಬ್ಲಡ್ ಕಲೆಕ್ಟ್ ಮಾಡಬೇಕು. ಅವರು ಒಂದು ತಿಂಗಳಿಗೆ 7 ಬಾಟಲ್ ಬ್ಲಡ್ ಕಲೆಕ್ಟ್ ಮಾಡಿದ್ದಾರೆ. ಏಕೆ ಈ ರೀತಿಯ ಆಡಳಿತ ವ್ಯವಸ್ಥೆ ಆಗುತ್ತಿದೆ? ಮತ್ತು ಅಲ್ಲಿರುವ ನಿರ್ದೇಶಕರು ಮತ್ತು ಸಿಬ್ಬಂದಿ ವರ್ಗದಲ್ಲಿ ಏನೂ ಸಾಮರಸ್ಯ ಇಲ್ಲ. ಆಕ್ಸಿಡೆಂಟ್ ಆಗಿ ರೋಗಿ ಹೋದರೆ ಅಲ್ಲಿ ಯಾರೂ ಕೇಳುವವರು ಇಲ್ಲ. ಸ್ಮಾಲ್ ಆಕ್ಸಿಡೆಂಟ್ಸ್ ಆಗುತ್ತಿರುತ್ತವೆ. ಅಲ್ಲಿ ಜನರಲ್ ಸರ್ಜರಿ ಮಾಡುವುದಕ್ಕೆ ವ್ಯವಸ್ಥೆಯೇ ಇಲ್ಲ. ಎಷ್ಟು ಜನರಲ್ ಸರ್ಜರಿ ಮಾಡಿದಿರಿ ಅಂತ ನಾನು ಕೇಳಿದರೆ ಅದಕ್ಕೆ ಉತ್ತರವೇ ಇಲ್ಲ. ಅಲ್ಲಿ ಅದಕ್ಕೆ ರಿಜಿಸ್ಟರ್ ಇಲ್ಲ. ಯಾವ ರೀತಿಯಲ್ಲಿ ಸಾಫ್ಟ್ ಆಕ್ಸಿಡೆಂಟ್ಸ್ ಆಗುತ್ತವೆ ಅದಕ್ಕೆ ಇದರಿಂದ ಧಕ್ಕೆಯಾಗುತ್ತದೆ. ಜನರಲ್ ಆಸ್ಪತ್ರೆಗಿಂತ ಒಬ್ಬ ನಿಷ್ಣಾತ ಶಸ್ತ್ರಚಿಕಿತ್ಸಕ ಅಲ್ಲಿ ಇರಬೇಕಾಗುತ್ತದೆ. ಏಕೆಂದರೆ ಲಿವರ್ ಕಿಡ್ನಿ ಸ್ಲೀನ್ ಇಂತಹ ಸೂಕ್ಷ್ಮ ಅಂಗಾಂಗಗಳಿಗೆ ಅಪಘಾತವಾಗುವಂಥ ಪ್ರಸಂಗ ಇರುತ್ತದೆ. ಅದಕ್ಕೆ ಟಾಪ್ ಜನರಲ್ ಸರ್ಜನ್ ಅನ್ನು ಅಲ್ಲಿಗೆ ಹಾಕಬೇಕಾಗುತ್ತದೆ. ಅಲ್ಲಿ ಟಾಪ್ ಜನರಲ್ ಸರ್ಜನ್ ಇಲ್ಲ. ಅಲ್ಲಿ ಏನು ಅಸಿಸ್ಟೆಂಟ್ ಪ್ರೊಫೆಸರ್ಸ್ ಇರುತ್ತಾರೆ ಅವರಿಗೆ ಕೆಲಸ ಇಲ್ಲ. ಒಬ್ಬ ಸ್ಟೂಡೆಂಟನ್ನು ಅಲ್ಲಿಗೆ ಹಾಕುತ್ತಿಲ್ಲ. ಏಕೆಂದರೆ ಅಲ್ಲಿ ರತಕ್ಕಂಥ ಸೇವೆ ಅಷ್ಟು ಸಮರ್ಪಕವಾಗಿಲ್ಲ ಅದಕ್ಕೆ ಯಾರೂ ಅಲ್ಲಿಗೆ ಪೋಸ್ಟಿಂಗ್ಸ್ ತೆಗೆದುಕೊಳ್ಳುವುದಕ್ಕೆ ತಯಾರಾಗಿಲ್ಲ. ತಾವು ಅಲ್ಲಿ ಕೂಡ ಇಂಡಿಪೆಂಡೆಂಟ್ ಆಸ್ಪತ್ರೆಯ ಕಟ್ಟಡ ಕಟ್ಟಿದ್ದೀರಿ. ಮಾನ್ಯ ಅರ್ಥ ಸಚಿವರು ಸಾಕಷ್ಟು ಹಣ ಬಿಡುಗಡೆ ಮಾಡಿತ್ತಿದ್ದೀರಿ ತಾವು ಆ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು. ಮತ್ತು 1992 ರಿಂದ ಅಲ್ಲಿ ಡಾಕ್ಟರ್ ದಾಸ್ ಎಂದು ಏನು ಇದ್ದಾರೆ. Dr. Das, from inception of the construction of the building till today he is there. ಆ ಆಸ್ಪತ್ರೆಯ ಕಟ್ಟಡದ ಕನ್‌ಸ್ಟ್ರಕ್ಷನ್ ಮತ್ತು ಡಿಸೈನ್ ಬಗ್ಗೆ ನಿಗಾ ವಹಿಸುವುದು ಆತನ ಆಧ್ಯ ಕರ್ತವ್ಯ. ಆದರೆ, ಅಲ್ಲಿ ಏನಾಗಿದೆ? ಮಳೆ ಬಂದಾಗ ಬೀದಿಯ ನೀರು ಆಸ್ಪತ್ರೆಯ ಆವರಣಕ್ಕೆ ಬರುತ್ತಿದೆ. ಹಾಗಾದರೆ ಇದು ಯಾವ ತರಹ ಕನ್‌ಸ್ಟ್ರಕ್ಷನ್? ಯಾವ ಡಿಸೈನ್? ಈಗ ಏನು ಮಾಡಿದ್ದಾರೆಂದರೆ, ಗ್ರೌಂಡ್ ಫ್ಲೋರ್‌ನ್ನು ರೀ ಮಾಡಲಿಂಗ್ ಪ್ರಕಾರ ಆಲ್ಟ್ರೇಷನ್ ಮಾಡುವುದಕ್ಕೆ ಸುಮಾರು 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇಷ್ಟು ಹಣದಲ್ಲಿ ಇಂಡಿಪೆಂಡೆಂಟ್ ಆಗಿ ಒಂದು ಬಿಲ್ಡಿಂಗ್ ಕಟ್ಟಬಹುದಾಗಿತ್ತು. ಎಲ್ಲಾ ಕಡೆ ಮಾರ್ಬಲ್ ಹಾಕಿ ಕಟ್ಟಿಸುವ ಅವಶ್ಯಕತೆ ಏನಿತ್ತು? ಆಪರೇಷನ್ ಥಿಯೇಟರ್‌ನಲ್ಲಿ ಕ್ಲೀನ್ಲಿನೆಸ್ ಮೇಂಟೇನ್ ಮಾಡಬೇಕಾಗಿರುವುದರಿಂದ ಅಂಥ ಕಡೆ ಮಾರ್ಬಲ್ಸ್ ಹಾಕಬಹುದು, ಅದು ಬಿಟ್ಟು ಅನಾವಶ್ಯಕವಾಗಿ ಜಾಗದಲ್ಲೆಲ್ಲಾ ಮಾರ್ಬಲ್ ಹಾಕುವುದನ್ನು ಬಿಡಬೇಕು.

ಇಷ್ಟು ಖರ್ಚು ಮಾಡಿ ಕಟ್ಟಡ ಕಟ್ಟಿದರೂ ಅಲ್ಲಿ ಸರಿಯಾದ ವೆಂಟಿಲೇಷನ್ ವ್ಯವಸ್ಥೆ ಇಲ್ಲ. ಜೊತೆಗೆ ಇಷ್ಟು ಖರ್ಚು ಮಾಡಿ ಕಟ್ಟಡ ಕಟ್ಟಿದ್ದರೂ ಅಲ್ಲಿಗೆ ಆಸ್ಪತ್ರೆಯನ್ನು ಶಿಫ್ಟ್ ಮಾಡುವುದಕ್ಕೆ ಇನ್ನೂ ಆಗಿಲ್ಲ. ಒಟ್ಟಿನಲ್ಲಿ ಈ ಸಂಜಯಗಾಂಧಿ ಆಸ್ಪತ್ರೆಯಲ್ಲಿ ಯಾವ ರೀತಿ ಇನ್‌ಫ್ರಾಸ್ಟ್ರಕ್ಚರ್ ಇರಬೇಕೋ ಆ ತರಹ ಇಲ್ಲ. ಆಕ್ಸಿಡೆಂಟ್‌ನಿಂದ ಫ್ರಾಕ್ಚರ್ ಆದ ಪೇಷೆಂಟ್‌ಗಳನ್ನು ರೀಹೆಬಿಲಿಟೇಟ್ ಮಾಡಬೇಕಾದರೆ ಒಂದು ವರ್ಷ ಬೇಕಾಗುತ್ತದೆ. ಅಸ್ಥಿಗಳನ್ನು ಕಳೆದುಕೊಂಡಂಥವರಿಗೆ ಆರ್ಟಿಫಿಷಿಯಲ್ ಅಸ್ಥಿಗಳನ್ನು ಜೋಡಿಸಬೇಕಾಗುತ್ತದೆ. ಈಗ ಇರುವ ಡೈರೆಕ್ಟರ್ 1992 ನೇ ಇಸವಿಯಲ್ಲಿ ಬಂದಾಗಿನಿಂದ ಇಲ್ಲಿಯವರೆಗೆ ಒಂದು ಆರ್ಟಿಫಿಷಿಯಲ್ ಅವಯವಗಳನ್ನು ತಯಾರು ಮಾಡಿಲ್ಲ- ಈ ಮೊದಲು ಅವಯವಗಳನ್ನು ಮಾಡಿರುವುದರಲ್ಲಿ ಇಡೀ ದೇಶದಲ್ಲೇ ಈ ಸಂಸ್ಥೆ ಖ್ಯಾತಿ ಗಳಿಸಿತ್ತು. ಬೇರೆ ಬೇರೆ ರಾಜ್ಯಗಳಿಂದ ಕೃತಕ ಅವಯವಗಳಿಗೆ ಬೇಡಿಕೆ ಬರುತ್ತಿತ್ತು. ಈ ಕೃತಕ ಅವಯವ ತಯಾರುಮಾಡತಕ್ಕಂಥ ಡಿಪಾರ್ಟ್‌ಮೆಂಟಿನಲ್ಲಿರತಕ್ಕಂಥ ಪ್ರೊಫೆಸರ್‌ರವರು ನನಗೆ ಏನೂ ಕೆಲಸ ಮಾಡಬಾರದೆನ್ನುವ ಬಗ್ಗೆ ಅವರು ಕೋರ್ಟ್‌ಗೆ ಹೋಗಿದ್ದಾರೆ. ಈ ವಿಷಯಗಳ ಬಗ್ಗೆ ಸದನ ಸಮಿತಿಯ ಮುಂದೆ ಹೇಳಿದರೂ ಪ್ರಯೋಜನವಾಗುವುದಿಲ್ಲ, ಮಿನಿಸ್ಟರ್‌ರವರನ್ನು ಭೇಟಿಯಾಗಿ ಹೇಳಿದರೂ ಪ್ರಯೋಜನವಾಗುವುದಿಲ್ಲ, ವರದಿಗಳ ಮೇಲೂ ಸರಿಯಾಗಿ ಆಕ್ಷನ್ ತೆಗೆದುಕೊಳ್ಳುವುದಿಲ್ಲ, ಪ್ರತಿ ತಿಂಗಳೂ ಈ ರೀಹೆಬಿಲಿಟೇಷನ್ ಡಿಪಾರ್ಟ್‌ಮೆಂಟ್‌ನಲ್ಲಿ 60 ಸಾವಿರ ರೂಪಾಯಿಗಳು ಖರ್ಚಾಗುತ್ತಿದ್ದರೂ 3 ವರ್ಷಗಳಿಂದ ಒಂದು ಆರ್ಟಿಫಿಷಿಯಲ್ ಅವಯವಗಳನ್ನು ತಯಾರು ಮಾಡಿಲ್ಲ. ಮಹಾರಾಷ್ಟ್ರ, ಮದ್ರಾಸ್‌ಗಳಿಂದ ಕೃತಕ ಅವಯವಗಳಿಗೆ ಸುಮಾರು 400 ಇಂಡೆಂಟ್‌ಗಳಿದ್ದರೂ ಈಗಿರುವ ಡೈರೆಕ್ಟರ್‌ರವರ ಆಡಳಿತ ದುರ್ವ್ಯವಸ್ಥೆಯಿಂದ 3 ವರ್ಷಗಳಿಂದ ಒಂದು ಕೃತಕ ಅವಯವೂ ತಯಾರಾಗಿಲ್ಲ. ಹಾಗಾದರೆ ಆ ಡಿಪಾರ್ಟ್‌ಮೆಂಟ್‌ನ್ನು ಏಕೆ ಇಟ್ಟಿದ್ದೀರಿ? ಈ ಡೈರೆಕ್ಟರ್ ಮಾಡಿರುವ ಕೆಲಸದ ಬಗ್ಗೆ ಪಾರ್ಥ-ಸಾರಥಿಯವರು ಎನ್‌ಕ್ವೈಯರಿ ಮಾಡಿ ಕೊಟ್ಟಿರುವ ವರದಿ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ನಾನು ಹೆಲ್ತ್ ಮಿನಿಸ್ಟರ್ ಆಗಿದ್ದಾಗ ಇದೇ ವ್ಯಕ್ತಿ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ ನಾನು ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದೆ. I was advised by the seniormost Secretary that we have to order an enquiry because afterwards he may change his stand. So, it is better to order an enquiry. ಎನ್‌ಕ್ವೈಯರಿ ರಿಪೋರ್ಟ್ ಕೂಡ ಕೊಡಲಾಗಿದೆ. ಯಾವ ಪುರುಷಾರ್ಥಕ್ಕಾಗಿ ಅವರನ್ನು ಅಲ್ಲೇ ಬಿಟ್ಟಿದ್ದೀರಿ? ಇನ್ನು ಮುಂದಾದರು ಈ ಸಂಜಯಗಾಂಧಿ ಚಿಕಿತ್ಸಾಲಯಕ್ಕೆ ತುರ್ತು ಚಿಕಿತ್ಸೆಯನ್ನು ನೀಡುವುದರ ಮೂಲಕ ಸರಿಪಡಿಸಬೇಕೆಂದು ತಮ್ಮ ಮೂಲಕ ಸರ್ಕಾರದಲ್ಲಿ ಕಳಕಳಿಯಿಂದ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಯು. ಆರ್. ಸಭಾಪತಿ :- ಮಾನ್ಯ ಉಪಾಧ್ಯಕ್ಷರೆ, ಈ ಸಂಜಯಗಾಂಧಿ ಅಪಘಾತ ಆಸ್ಪತ್ರೆಗೆ ಸಾರ್ವಜನಿಕ ದೇಣಿಗೆ ಲಕ್ಷಾಂತರ ರೂಪಾಯಿ ಬಂದಿದೆ. ಅಲ್ಲಿರುವ

ಕೃತಕ ಅಂಗ ಜೋಡಣೆ ಯೂನಿಟನ್ನು ಬಲಪಡಿಸುವುದಕ್ಕೋಸ್ಕರ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಉಚಿತವಾಗಿ ಸಲಕರಣೆಗಳು ಬಂದಿವೆ, ಸರ್ಕಾರದಲ್ಲಿ ಹಣ ಇಲ್ಲದೇ ಇರುವಾಗ ಇನ್ನೊಬ್ಬರು ಕೊಟ್ಟಂಥ ವಸ್ತುಗಳನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗುದಿಲ್ಲವೆಂದರೆ ಹೇಗೆ? ಇದರ ಬಗ್ಗೆ ನಾನು ಒಂದು ವರ್ಷದ ಹಿಂದಿನಿಂದ ಪ್ರಸ್ತಾಪ ಮಾಡಿದ್ದೇನೆ. ಇದುವರೆಗೂ ಸರ್ಕಾರದಿಂದ ಉತ್ತರ ಇಲ್ಲ.

ಶ್ರೀ ಜಿ. ಬಿ. ಶಿವಕುಮಾರ್ :- ಮಾನ್ಯ ಉಪಾಧ್ಯಕ್ಷರೆ, ಡಾ : ಮಲಕರೆಡ್ಡಿಯವರ ಬಗ್ಗೆ ನನಗೆ ಅಪಾರವಾದ ಗೌರವ ಇದೆ. ಅವರೂ ಈ ಹಿಂದೆ ಆರೋಗ್ಯ ಸಚಿವರಾಗಿ ಕೆಲಸ ಮಾಡಿದ್ದಾರೆ. ಇವತ್ತು ಸರ್ಕಾರದಲ್ಲಿ ಮೆಡಿಕಲ್ ಎಜುಕೇಷನ್ ಮಂತ್ರಿಗಳಾಗಿರುವವರೂ ಡಾಕ್ಟರೇ ಆಗಿದ್ದಾರೆ. ಮಾನ್ಯ ಮಲಕರೆಡ್ಡಿಯವರು ಈಗ ಕೊಡುತ್ತಿರುವ ಸಲಹೆಗಳನ್ನು ಸ್ವೀಕರಿಸಿ ಅದರಂತೆ ಕ್ರಮ ತೆಗೆದುಕೊಂಡರೆ ಬಹಳ ಒಳ್ಳೆಯದೆಂದು ಹೇಳಿ ಆರೋಗ್ಯವಾಗಿರಬೇಕಾದರೆ ಟೈಮ್ ಟೈಮ್‌ಗೆ ಸರಿಯಾಗಿ ಊಟ ಮಾಡಬೇಕು, ಈಗಾಗಲೇ ಒಂದೂವರೆ ಗಂಟೆ ಸಮಯವಾಗಿದೆ. ಈಗ ಊಟ ಮಾಡಿಕೊಂಡು ಬಂದಾದ ಮೇಲೆ ಅವರು ಇನ್ನೊಂದು ಗಂಟೆ ಸಲಹೆ ಕೊಟ್ಟರೂ ಅದನ್ನು ನಾವು ಸಂಪೂರ್ಣವಾಗಿ ಕೇಳುತ್ತೇನೆ.

ಉಪಾಧ್ಯಕ್ಷರು :- ಇನ್ನೂ ಸ್ವಲ್ಪ ಸಮಯದಲ್ಲಿ ಅವರು ಮುಗಿಸುತ್ತಾರೆ.

ಡಾ : ಎ. ಬಿ. ಮಲಕರೆಡ್ಡಿ :- ಮಾನ್ಯ ಉಪಾಧ್ಯಕ್ಷರೆ, ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟ್ ಬಗ್ಗೆ 5 ನಿಮಿಷಗಳ ಕಾಲ ಮಾತನಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ಡ್ರಗ್ ಕಂಟ್ರೋಲ್ ಡಿಪಾರ್ಟ್‌ಮೆಂಟಿನವರ ಕೆಲಸವೇನೆಂದರೆ, ಮಾರಾಟವಾಗತಕ್ಕಂಥ ಔಷಧಿಗಳ ಬೆಲೆ ಹಾಗೂ ಗುಣಮಟ್ಟದ ಬಗ್ಗೆ ನಿಯಂತ್ರಣ ಮತ್ತು ನಿಗಾ ಇಡುವಂಥ ಕೆಲಸ ಮಾಡಬೇಕು. ಆ ಒಂದು ಕೆಲಸವನ್ನು ಬಿಟ್ಟು ಉಳಿದ ಎಲ್ಲಾ ಕೆಲಸವನ್ನು ಅವರು ಮಾಡುತ್ತಿದ್ದಾರೆ. ನಾನು ಆರೋಗ್ಯ ಮಂತ್ರಿಯಾಗಿದ್ದಾಗಲೇ ರೇಟ್ ಕಾಂಟ್ರಕ್ಟ್ ಓವರ್ ಡ್ಯೂ ಆಗಿತ್ತು, ಅದನ್ನು ಕ್ರಮೇಣ ಸರಿಮಾಡಿಕೊಂಡು ಕೊನೆ ಹಂತಕ್ಕೆ ತಂದಿದ್ದೆವು, ಅಷ್ಟು ಹೊತ್ತಿಗೆ ಎಲೆಕ್ಷನ್ ಡಿಕ್ಲೇರ್ ಆಗಿದ್ದರಿಂದ ಅದನ್ನು ಪೂರ್ಣ ಮಾಡುವುದಕ್ಕಾಗಲಿಲ್ಲ. ಈಗ ಹೊಸ ಸರ್ಕಾರ ಬಂದು ಒಂದೂವರೆ ವರ್ಷವಾದರೂ ಹೊಸರೇಟ್ ಕಾಂಟ್ರಕ್ಟ್ ಏಕೆ ಜಾರಿಗೆ ಬರಲಿಲ್ಲ? ಈ ರೀತಿ ಡಿಲೇ ಆಗುವುದಕ್ಕೆ ಕಾರಣವೇನು? ಸುದೈವದಿಂದ ಆರೋಗ್ಯ ಇಲಾಖೆಯಲ್ಲಿ ಒಳ್ಳೆಯ ಸೆಕ್ರೆಟರಿ ಇದ್ದಾರೆ. ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳು ಆದಾಯ ಬರುವುದಕ್ಕೆ ಅವರು ಕಾರಣರಾಗಿದ್ದಾರೆ. ಆ ಅಧಿಕಾರಿಯನ್ನು ತಾವು ಅಲ್ಲೇ ಉಳಿಸಿಕೊಳ್ಳಿ. ರೇಟ್ ಕಾಂಟ್ರಾಕ್ಟ್ ಮಾಡಿಕೊಂಡರೆ ಕೋಟ್ಯಾಂತರ ರೂಪಾಯಿಗಳು ಸರ್ಕಾರಕ್ಕೆ ಉಳಿತಾಯವಾಗುತ್ತದೆ.

ರೇಟ್ ಕಾಂಟ್ರಾಕ್ಟ್ ಇಲ್ಲದೆ ಹೋದರೆ ಔಷಧಿಗಳನ್ನು ಬಜಾರ್‌ನಲ್ಲಿ ಕೊಂಡುಕೊಳ್ಳ ಬೇಕಾಗುತ್ತಿದೆ. ನಾವು ಪಬ್ಲಿಕ್ ಅಂಡರ್ ಟೇಕಿಂಗ್‌ಗಳಿಂದಲೇ ಕೊಂಡುಕೊಳ್ಳುತ್ತೇವೆಂದು ಸರ್ಕಾರ ಹೇಳಬಹುದು, ಆದರೆ, ಇವುಗಳಿಂದ ಸರ್ಕಾರ 34 ಡ್ರಗ್ಸ್ ಮಾತ್ರ ಸರ್ಕಾರ ಕೊಂಡುಕೊಳ್ಳಬಹುದು, ಆದರೆ, ಬೇಕಾಗಿರುವುದು 400 ಸೀರಿಯಲ್ ಔಷಧಿಗಳು ಬೇಕಾಗುತ್ತವೆ. ಇಷ್ಟೆಲ್ಲಾ ಮೆಡಿಸಿನ್ ಅನ್ನು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಿಂದ ಕೊಂಡುಕೊ ಳ್ಳುವುದಕ್ಕಾಗುವುದಿಲ್ಲವಾದ್ದರಿಂದ ರೇಟ್ ಕಾಂಟ್ರಾಕ್ಟ್ ಮಾಡಿಕೊಂಡು ಕಂಟ್ರಾಕ್ಟರು ಗಳಿಂದ ಔಷಧಿಗಳನ್ನು ತೆಗೆದುಕೊಳ್ಳಲೇ ಬೇಕಾಗುತ್ತದೆ. ಈಗ ಮಾರ್ಕೆಟ್ ಮೂಲಕ ಪರ್ಚೇಸ್ ಮಾಡಲಾಗುತ್ತಿದೆ? ಇದರಿಂದ 30 ರಿಂದ 40 ಪರ್‌ಸೆಂಟ್ ಹೆಚ್ಚಿಗೆ ಹಣ ವ್ಯಯ ಮಾಡಬೇಕಾಗಿದೆ. ಇದಕ್ಕೆಲ್ಲಾ ಯಾರು ಕಾರಣ?

ಶ್ರೀ ಹೆಚ್. ಸಿ. ಮಹದೇವಪ್ಪ :- ಮಾನ್ಯ ಉಪಾಧ್ಯಕ್ಷರೆ, ಈ ಮೊದಲು ಐದು ನೂರು, ಆರು ನೂರು ಐಟಮ್‌ಗಳನ್ನು ತೆಗೆದುಕೊಳ್ಳುತ್ತಿದ್ದುದನ್ನು ಸ್ಟ್ರೀಮ್‌ಲೈನ್ ಮಾಡಿ ನಿಲ್ಲಿಸಲಾಗಿದೆ. ಯಾರು ಕಳಪೆ ಔಷಧಿಗಳನ್ನು ಸಪ್ಲೈ ಮಾಡುತ್ತಿದ್ದರೋ ಅವರನ್ನು ಜೈಲಿಗೆ ಕೂಡ ಕಳುಹಿಸಲಾಗಿದೆ. ಈಗ ರೇಟ್ ಕಾಂಟ್ರಾಕ್ಟ್ ವಿಷಯವನ್ನು ಕ್ಯಾಬಿನೆಟ್ ಮುಂದೆ ಇಟ್ಟು ಅದರ ಬಗ್ಗೆ ದೀರ್ಘವಾಗಿ ಚರ್ಚೆ ಮಾಡಿ ಉತ್ತಮವಾದ ಸುಧಾರಣೆಯನ್ನು ಮಾಡಿದ್ದೇವೆ. ಈ ವಿಷಯದ ಬಗ್ಗೆ ಒಂದು ಸದನ ಸಮಿತಿಯನ್ನು ಸಹಾ ನೇಮಕ ಮಾಡಲಾಗಿತ್ತು. ಆ ಸಮಿತಿಯವರೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈಗ ತಾವು ಕೊಡುತ್ತಿರುವ ಸಲಹೆಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆ.

ಡಾ : ಎ. ಬಿ. ಮಲಕರೆಡ್ಡಿ :- ಮಾನ್ಯ ಉಪಾಧ್ಯಕ್ಷರೇ, ಯಾವ ರೀತಿ ಉತ್ತಮ ಔಷಧಿಗಳನ್ನು ಕೊಡುತ್ತಾರೆಂಬ ಬಗ್ಗೆ ನಾನು ಒಂದು ಎಕ್ಸಾಂಪಲ್ ಕೊಡುತ್ತೇನೆ, ಔಷಧಗಳ ಗುಣಮಟ್ಟವನ್ನು ಪರೀಕ್ಷೆ ಮಾಡಲು ಒಂದು ಪ್ರಯೋಗಾಲಯವಿದೆ, ರೇಟ್ ಕಂಟ್ರಾಕ್ಟ್ ಮೂಲಕ ನಾವು ಕಣ್ಣು ಮುಚ್ಚಿಕೊಂಡು ಎಲ್ಲಾ ತೆಗೆದುಕೊಳ್ಳುವುದಕ್ಕಾಗುವುದಿಲ್ಲ, ರ್‍ಯಾಂಡವರ್ ಆಗಿ ಸ್ಯಾಂಪಲ್ ತೆಗೆದುಕೊಂಡು ಅದನ್ನು ಲ್ಯಾಬೋರೇಟರಿಗೆ ಕಳುಹಿಸಿ ಪರೀಕ್ಷೆ ಮಾಡಿಸಬೇಕಾಗುತ್ತದೆ.

1-40 ಪಿ. ಎಂ.

ಸರಕಾರದ ಆಸ್ಪತ್ರೆಗಳಲ್ಲಿ ಹಾಗೂ ಖಾಸಗಿ ಡಾಕ್ಟರ್‌ಗಳು ಕೂಡ ಔಷಧಿಗಳಿಗಾಗಿ ಬರೆದುಕೊಡುತ್ತಾರೆ. ನಾವು ಮಾರ್ಕೆಟ್‌ನಲ್ಲಿ ಇರುವ ಔಷಧಿಗಳ ಗುಣಮಟ್ಟವನ್ನು ನೋಡಬೇಕಾಗುತ್ತದೆ. ಮಾರ್ಕೆಟ್‌ನಲ್ಲಿ ಬಂದಂಥ ಔಷಧಿಗಳ ಎಲ್ಲಾ ಸ್ಯಾಂಪಲ್‌ಗಳನ್ನು ನೋಡಬೇಕಾಗುತ್ತದೆ. ಹೋದ ಸಾರಿ ನಮ್ಮ ಸರಕಾರದ ವ್ಯವಸ್ಥೆಯ ಮೂಲಕ 2500 ವಿವಿಧ ಔಷಧಿಗಳ ಸ್ಯಾಂಪಲ್‌ಗಳನ್ನು ಟೆಸ್ಟ್ ಮಾಡಿದ್ದಾರೆ. ಆದರೂ ಕೂಡ ಟೆಸ್ಟ್

ಆಗದ ಇನ್ನೂ 900 ಔಷಧಿಗಳ ಬಜಾರ್‌ನಲ್ಲಿ ಮಾರಾಟವಾಗುತ್ತಾ ಇವೆ. 74 ಲಕ್ಷ ರೂ. ಗಳನ್ನು ಪ್ರಯೋಗಶಾಲೆಗಾಗಿ ವಿನಿಯೋಗವಾಗಿದೆ. ಅಂದರೆ ನೀವು ಮಾಡಿದ 2500 ಟೆಸ್ಟ್‌ಗಳಿಗೆ ಒಂದಕ್ಕೆ 3000 ರೂ. ಗಳ ಹಾಗೆ ಬಿತ್ತು. ಅದೇ ಟೆಸ್ಟನ್ನು ಖಾಸಗಿಯಾಗಿ ಮಾಡಿದ್ದಲ್ಲಿ 300 ರೂ. ಗಳಿಗೆ ಆಗುತ್ತಿತ್ತು. ಅಂದರೆ ಸರಕಾರದ ವ್ಯವಸ್ಥೆಯಲ್ಲಿ ಅಧಿ ಕಾರಿಗಳು ಮತ್ತು ವಿಭಾಗಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ನೋಡಿ. ಆ ಬಗ್ಗೆ ಮಂತ್ರಿಯಾದ ತಾವುಗಳು ನಿಗಾ ಇಟ್ಟುಕೊಳ್ಳಬೇಕು. ಇಲ್ಲವಾದಲ್ಲಿ ಅವರು ಮೋಸ ಮಾಡುತ್ತಾರೆ. ನಾವು 300 ರೂ. ಗಳಲ್ಲಿ ಆಗುವುದನ್ನು 3000 ರೂಪಾಯಿಗಳಿಗೆ ಮಾಡುವುದಾದರೂ ಏಕೆ? ಇಷ್ಟು ಮಾಡಿಯೂ ಇನ್ನೂ 900 ಸ್ಯಾಂಪಲ್‌ಗಳು ಟೆಸ್ಟ್ ಮಾಡಲಾರದೆ ಉಳಿದಿವೆ ಅಂದರೆ ಲ್ಯಾಬ್‌ನಲ್ಲಿ ಯಾವ ರೀತಿಯಲ್ಲಿ ಕೆಲಸಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಊಹಿಸಬಹುದು. ಇಂಥ ಎಲ್ಲಾ ಲೋಪದೋಷಗಳನ್ನು ಹೋಗಲಾಡಿಸಬೇಕು ಪ್ರಯೋಗಶಾಲೆಯವರನ್ನು ಕೇಳಿದರೆ ನಮಗೆ ಸೂಕ್ತ ಸಿಬ್ಬಂದಿ ಇಲ್ಲ ಎಂದು ಹೇಳುತ್ತಾರೆ. ಈ ಎಲ್ಲಾ ನೆಪಗಳನ್ನು ಹೋಗಲಾಡಿಸಿ ಜನರಿಗೆ ಒಳ್ಳೆಯ ಗುಣಮಟ್ಟದ ಔಷಧಿಗಳನ್ನು ಒದಗಿಸಿಲ್ಲ ಅಂದರೆ ಇಲಾಖೆ ಇದ್ದು ಏನು ಪ್ರಯೋಜನ? ಅವರಿಗೆ ಬೇಕಾದ ಪ್ರಮೋಶನ್‌ಗಳನ್ನು, ಇತರ ಎಲ್ಲಾ ಸೌಲಭ್ಯಗಳನ್ನು ನಾವು ಕೊಡುತ್ತಾ ಇದ್ದೇವೆ. ಆದರೂ ಫಲಕಾರಿಯಾಗಿ ಇಲಾಖೆಯ ಕೆಲಸವು ನಡೆಯಬೇಕು. ತಾವುಗಳಿಬ್ಬರೂ ಸಚಿವರು ಯುವಕರಿದ್ದೀರಿ, ಹೊಸಬರಿದ್ದೀರಿ, ಆದುದರಿಂದ ಸರಿಯಾಗಿ ಹೋಂವರ್ಕ್ ಮಾಡಿ, ಈ ಲೋಪದೋಷಗಳನ್ನು ನಿವಾರಣೆ ಮಾಡಿ. ಸದನದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಸಲಹೆಯನ್ನು ಕೊಡುತ್ತಾರೆ. ಅದನ್ನು ಗೌರವಪೂರ್ವಕವಾಗಿ ಕೇಳಿ. ತಮ್ಮ ಕೆಲಸ ಬ್ಯುರೋಕ್ರಾಟ್ಸ್ ಹೇಳಿದ್ದನ್ನು ಕೇಳಿಕೊಂಡು ಮಾಡುವುದಷ್ಟೇ ಕೆಲಸವಲ್ಲ. ಜನರ ವತಿಯಿಂದ ಸಾರ್ವಜನಿಕರ ವತಿಯಿಂದ, ಸದಸ್ಯರ ಕಡೆಯಿಂದ ಏನೇನು ಕಂಪ್ಲೇಂಟ್ಸ್ ಬರುತ್ತವೆ ಅವುಗಳನ್ನು ಸ್ಟಡಿ ಮಾಡಿ ಅವುಗಳಿಗೆ ಸೂಕ್ತ ಪರಿಹಾರವನ್ನು ಒದಗಿಸಿ ಕೊಡುವುದೇ ನಮ್ಮ ಆದ್ಯಕರ್ತವ್ಯವಾಗಿದೆ. ಈಗ ಎಲ್ಲಾ ಕಡೆ ಕೇಳಿ ಬರುವಂತೆ ಜ್ಯುಡಿಶಿಯಲಿ ಆಕ್ಟಿವಿಸಂ ಕೂಡ ನಡೆದಿದೆ. ನಾನು ಮಾನ್ಯ ಅಧ್ಯಕ್ಷರ ಆಕ್ಟಿವಿಸಂ ಕೂಡ ಪ್ರಾರಂಭವಾಗಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :- ಮಾನ್ಯ ಅಧ್ಯಕ್ಷರೇ, ಸುಪ್ರೀಂಕೋರ್ಟ್‌ನಲ್ಲಿ ಕೂಡ ಇಂಥ ಒಂದು ತೀರ್ಮಾನವನ್ನು ಮಾಡಿದ್ದಾರೆ. ಏಕೆಂದರೆ, ಸಾರ್ವಜನಿಕರ ಜೀವ ರಕ್ಷಣೆ ಮಾಡತಕ್ಕಂಥಾದ್ದು ಸರಕಾರದ ರಾಜ್ಯಾಂಗದ ಕರ್ತವ್ಯ. ಇವೊತ್ತು ನಮ್ಮ ಆಸ್ಪತ್ರೆಗಳಲ್ಲಿ ಸರಿಯಾದ ಸೇವೆಗಳನ್ನು ಕೊಡದೇನೆ, ಡಾಕ್ಟರ್ ಇಲ್ಲದೇನೇ, ಔಷಧಿಗಳು ಇಲ್ಲದೇನೇ ಟೆಕ್ನೀಶಿಯನ್ಸ್ ಇಲ್ಲದೇ ಅಥವಾ ನೆಗ್ಲೀಜೆಯನ್ನಿ ಇಂದಾಗಿಯೋ, ಅಥವಾ ಎಷ್ಟು ಅವಶ್ಯಕವ್ಯವಸ್ಥೆಗಳನ್ನು ಕೊಡಬೇಕಾಗಿತ್ತೋ ಅದನ್ನು ಕೊಡದೇ ರೋಗಿಯೊಬ್ಬ ಸತ್ತು ಹೋದರೆ ಇವೊತ್ತು ಸರಕಾರ ಸಂಬಂಧಪಟ್ಟವರಿಗೆ ಪರಿಹಾರವನ್ನು ಕೊಡ ಬೇಕಾಗಿತ್ತದೆ. ಹೀಗೆ ಸುಪ್ರೀಂಕೋರ್ಟ್‌ನಲ್ಲಿ ತೀರ್ಮಾನವಾದ ಮೇಲೆ ಪ್ರತಿಯೊಬ್ಬ

ನಾಗರೀಕನೂ ಕೂಡ ನಾಳೆ ಕೋರ್ಟ್‌ನ ಮೊರೆಹೊಕ್ಕರೆ ಆಗ ಜ್ಯುಡಿಶಿಯಲ್ ಆಕ್ಟಿವೈಸ್ ಆಗಿ ಕೋಟ್ಯಾಂತರ ರೂಪಾಯಿಗಳ ಪರಿಹಾರವನ್ನು ಸರಕಾರವು ಕೊಡಬೇಕಾಗುತ್ತದೆ. ಅಂಥ ಒಂದು ಬಂಧನಪೂರ್ವಕ ನಿಯಮಗಳು ಲಾಗೂ ಆಗುತ್ತವೆ. ಆದುದರಿಂದ ಲಕ್ಷ್ಯಪೂರ್ವಕವಾಗಿ ತೀರ್ಪಿನ ವಿವರಗಳನ್ನು ಓದಿ, ಅಧ್ಯಯನ ಮಾಡಿ, ಅದರ ಬಗ್ಗೆ ಲಕ್ಷ್ಯ ಕೊಡಬೇಕಾದ ಅಗತ್ಯವಿದೆ.

ಶ್ರೀ ಸಿದ್ಧರಾಮಯ್ಯ :– ನಾಗರೀಕರ ಪ್ರಾಣರಕ್ಷಣೆಯ ಜವಾಬ್ದಾರಿಯು ಸುಪ್ರೀಂ ಕೋರ್ಟ್‌ನವರು ತೀರ್ಪುಕೊಟ್ಟ ನಂತರ ಬಂದುದಲ್ಲ. ಇದು ಪ್ರಜಾತಂತ್ರದಲ್ಲಿರತಕ್ಕಂಥ ಯಾವುದೇ ಸರಕಾರದ ಜವಾಬ್ದಾರಿಯಾಗಿರುತ್ತದೆ. ಈಗ ಇದ್ದಕ್ಕಿದ್ದ ಹಾಗೆ ಸುಪ್ರೀಂ ಕೋರ್ಟ್‌ನವರು ಅದರ ಜ್ಞಾಪಕವನ್ನು ಮಾಡಿದ್ದಾರೆ. ನಾಗರೀಕರ ರಕ್ಷಣೆಯ ಜವಾಬ್ದಾರಿ ನಿಮ್ಮದ್ದು ಎಂದು ಜ್ಞಾಪಿಸಿದ್ದಾರೆ. ಬಹಳ ವರ್ಷಗಳಿಂದ ಈ ಜವಾಬ್ದಾರಿಯು ನಡೆದಿಲ್ಲ. ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲದಿರುವುದು, ನರ್ಸ್‌ಗಳು ಇಲ್ಲದಿರುವುದು, ಟೆಕ್ನೀಶಿಯನ್‌ಗಳು, ಎಕ್ಸ್‌ರೇ ಯಂತ್ರ ಇಲ್ಲದಿರುವುದು- ಹೀಗೆ ಬಹಳ ವರ್ಷಗಳಿಂದ ನಡೆದುಕೊಂಡು ಬಂದಿತ್ತು. ನಾವು ಈಗ ಡಾಕ್ಟರ್‌ಗಳನ್ನು ನೇಮಕ ಮಾಡಲು ಪ್ರಾರಂಭಮಾಡಿದ್ದೇವೆ. ಪಿ.ಎಸ್‌ಸಿಇಂದ 600 ಜನ ಡಾಕ್ಟರ್‌ಗಳನ್ನು ಭರ್ತಿ ಮಾಡುತ್ತಿದ್ದಾರೆ. ಟೆಕ್ನೀಶಿಯನ್ಸ್ ರಿಕ್ರೂಟ್ ಮಾಡಿದ್ದಾರೆ. ನರ್ಸ್‌ಗಳನ್ನು ರಿಕ್ರೂಟ್ ಮಾಡುತ್ತಾ ಇದ್ದೇವೆ. ಹೀಗೆ ಕೆಲಸಗಳು ನಡೆಯುತ್ತಾ ಇವೆ. ನಮ್ಮ ಹಕ್ಕುಗಳನ್ನು ಪಡೆದುಕೊಳ್ಳತಕ್ಕಂಥ ಜಾಗೃತಿಯು ನಮ್ಮಲ್ಲಿ ಇಲ್ಲದ ಕಾರಣ ನಾವು ಜಡವಾಗಿದ್ದೇವೆ. ಅದನ್ನು ಸುಪ್ರೀಂಕೋರ್ಟ್‌ನವರು ಜ್ಞಾಪಿಸಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ :– ಇವೊತ್ತು ರಾಜ್ಯದಲ್ಲಿನ 500-600 ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಇವೊತ್ತು ಸ್ಥಳೀಯವಾಗಿ ಒಬ್ಬ ಆಕ್ಸಿಡೆಂಟ್ ಆಗಿಯೋ, ಇನ್ನಾವುದಕ್ಕೋ ಹೋಗಿ ಅಡ್ಮಿಟ್ ಆಗುತ್ತಾನೆ. ಅಲ್ಲಿ ಡಾಕ್ಟರ್ ಇಲ್ಲದೇ ಆ ರೋಗಿಯು ಮೃತಪಟ್ಟರೆ ಅನಿವಾರ್ಯವಾಗಿ ಸುಪ್ರೀಂಕೋರ್ಟ್‌ನ ತೀರ್ಪಿನ ಆಧಾರದ ಮೇಲೆ ಸಾರ್ವಜನಿಕರು ಡ್ಯಾಮೇಜನ್ನು ಕೇಳಿದರೆ ಸರಕಾರ ಕೊಡಬೇಕಾಗುತ್ತದೆ. ಅದಕ್ಕಾಗಿ ಡಾ : ಮಲಕರೆಡ್ಡಿಯವರು ಸುಮಾರು 8000 ಹುದ್ದೆಗಳನ್ನು ತುಂಬಬೇಕಾಗಿದೆ ಎಂದು ಹೇಳಿದ್ದಾರೆ. ಆ ಕೆಲಸವನ್ನು ಮೊದಲು ಮಾಡಿ. ನೀವು ಡಾಕ್ಟರ್ ಎಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನೀವೇನು ಆಸ್ಪತ್ರೆಗಳನ್ನು ಮುಚ್ಚಿದ್ದೀರಲ್ಲ ಅವುಗಳನ್ನು ಕೂಡಲೇ ತೆರೆಸಿ. ಬೇರೆ ಏನೂ ಕೊಡುವುದು ಬೇಡ. ಅಲ್ಲಿಗೆ ಬಾಗಿಲು ತೆರೆಸಿ ಡಾಕ್ಟರ್‌ಗಳನ್ನು ಕಳುಹಿಸಿ.

ಡಾ : ಹೆಚ್. ಸಿ. ಮಹದೇವಪ್ಪ :– ಮಾನ್ಯ ಅಧ್ಯಕ್ಷರೆ, ಖಾಸಗಿ ವೈದ್ಯರೊಬ್ಬರ ನಿರ್ಲಕ್ಷ್ಯದಿಂದಾಗಿ ರೋಗಿಯು ಮೃತಪಟ್ಟಂಥ ಸಂದರ್ಭದಲ್ಲಿ ಸುಪ್ರೀಂಕೋರ್ಟ್ ಒಂದು ಆದೇಶವನ್ನು ಕೊಟ್ಟು ಕನ್‌ಸ್ಯೂಮರ್ ಫೋರಂನ ಕೆಳಗಡೆ ಈ ರೀತಿಯ ವೈದ್ಯರ ನಿರ್ಲಕ್ಷ್ಯದಿಂದ ಉಂಟಾದ ಸಾವುಗಳನ್ನು ಪರಿಗಣನೆಗೆ ತೆಗೆದುಕೊಂಡು ಪರಿಹಾರ

ಒದಗಿಸಬೇಕೆಂದು ಕೊಟ್ಟಿದೆ. ಆದರೆ ಡಾಕ್ಟರ್ಸ್ ಇಲ್ಲ, ನರ್ಸ್ ಇಲ್ಲ... ಮುಂತಾಗಿ ಏನೂ ಕೊಟ್ಟಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ :- ಇದು ಸರಕಾರಿ ಡಾಕ್ಟರ್‌ಗೆ ಅನ್ವಯಿಸುವುದಿಲ್ಲವೇ? ಖಾಸಗಿಯವರಿಗೆ ಮಾತ್ರವೇ?

ಡಾ : ಹೆಚ್. ಸಿ. ಮಹದೇವಪ್ಪ:- ವೈದ್ಯರ ನಿರ್ಲಕ್ಷ್ಯದಿಂದ ಸಾವು ಉಂಟಾಗಿ ಯಾರು ತೊಂದರೆಗೆ ಒಳಪಡುತ್ತಾರೋ ಅಂಥವರಿಗೆ ಪರಿಹಾರ ಕೊಡಬೇಕೆಂದು ಹೇಳಿದೆ. 10-12 ವರ್ಷಗಳಿಂದ ಯಾರೂ ಈ ಡಾಕ್ಟರ್‌ಗಳ ಹುದ್ದೆಗೆ ರಿಕ್ರೂಟ್‌ಮೆಂಟ್ ಮಾಡಿರಲಿಲ್ಲ. ನಾವು ಈಗ ಪ್ರಾರಂಭ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ :- 1991 ರಲ್ಲಿ ಸುಮಾರು 700 ಜನ ಡಾಕ್ಟರ್‌ಗಳನ್ನು ನೇಮಕ ಮಾಡಿದ್ದೇವೆ.....

ಡಾ : ಹೆಚ್. ಸಿ. ಮಹದೇವಪ್ಪ:- ಅದು ಕಾಂಟ್ರಾಕ್ಟ್ ಬೇಸಿಸ್‌ನ ಮೇಲೆ ತೆಗೆದುಕೊಂಡಿದ್ದು.

ಶ್ರೀ ಕಾಗೋಡು ತಿಮ್ಮಪ್ಪ:- 1983 ರಿಂದ 1991 ರ ವರೆಗೆ ಯಾವ ಡಾಕ್ಟರ್‌ಗಳ ನೇಮಕ ಕೂಡ ಆಗಿರಲಿಲ್ಲ. ಅದಕ್ಕೆ ಉತ್ತರವನ್ನು ಮಾನ್ಯ ಸಿದ್ಧರಾಮಯ್ಯನವರು ಹೇಳಬೇಕು....

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೇ, 1994 ರಲ್ಲಿ ಟೆಕ್ನೀಶಿಯನ್ಸ್, ನರ್ಸ್ ಮುಂತಾಗಿ ನೇಮಕ ಮಾಡಲು ನಿರ್ಬಂಧ ಇತ್ತು. ಕ್ಲಾಸ್ ಫೋರ್ ಎಂಪ್ಲಾಯೀಸ್ ಮಾಡಲು ನಿರ್ಬಂಧ ಇತ್ತು. ಇವರ ಕಾಲದಲ್ಲಿ ಅದನ್ನು ಮುಂದುವರೆಸಿಕೊಂಡು ಬಂದಿದ್ದರು. ನಾನು ಫೈನಾನ್ಸ್ ಮಿನಿಸ್ಟರ್ ಆದಮೇಲೆ ಖಾಲಿ ಇರತಕ್ಕಂಥ ಡಾಕ್ಟರ್ ಹುದ್ದೆಗಳನ್ನು ಭರ್ತಿ ಮಾಡಿ, ಎಲ್ಲಾ ನರ್ಸ್, ಟೆಕ್ನೀಶಿಯನ್ಸ್ ಹುದ್ದೆಗಳನ್ನು ಭರ್ತಿಮಾಡಿ ಎಂದು ಹೇಳಿ ನಿರ್ಭಂದಗಳನ್ನು ತೆಗೆದು ಹಾಕಿದ್ದೇವೆ ಆಯುರ್ವೇದ ಕಾಲೇಜುಗಳಲ್ಲಿಯೂ ಕೂಡ ಇರುವ ನಿರ್ಬಂಧಗಳನ್ನು ತೆಗೆದುಹಾಕಬೇಕೆನ್ನುವಂತಾದ್ದು ಇತ್ತು. ನೀವು ನೇಮಕ ಮಾಡಿಕೊಂಡಿದ್ದು ಕಾಂಟ್ರಾಕ್ಟ್ ಡಾಕ್ಟರ್‌ಗಳು. ಅವರುಗಳನ್ನು ಖಾಯಂ ಮಾಡತಕ್ಕಂಥ ನಿರ್ಣಯವನ್ನು ಕೂಡ ನಮ್ಮ ಸರಕಾರವೇ ಮಾಡಿತು.

ಡಾ : ಹೆಚ್. ಸಿ. ಮಹದೇವಪ್ಪ :- ಮಾನ್ಯ ಅಧ್ಯಕ್ಷರೇ, 1991-92 ರಿಂದ ಇಲ್ಲಿಯತನಕ ಸುಮಾರು 1800 ವೈದ್ಯರುಗಳನ್ನು ಕಾಂಟ್ರಾಕ್ಟ್‌ಬೇಸ್‌ನ ಮೇಲೆ ತೆಗೆದುಕೊಂಡಿದ್ದರು. ಅದರಲ್ಲಿ ಸುಮಾರು ಒಂದು ಸಾವಿರ ಜನರು ಕೆಲಸಕ್ಕೆ ಸೇರಿದ್ದಾರೆ ಇನ್ನೂ ಕೆಲವರು ಹೋಗಿಲ್ಲ. ಸುಮಾರು 222 ವೈದ್ಯರ ಹುದ್ದೆಗಳು ಗ್ರಾಮಾಂತರ

ಪ್ರದೇಶಗಳಲ್ಲಿ ಖಾಲಿ ಇದ್ದಾವೆ. 1992 ರಲ್ಲಿ ಪಬ್ಲಿಕ್ ಸರ್ವೀಸ್ ಕಮಿಶನ್ ಮುಖಾಂತರ ಅರ್ಜಿಗಳನ್ನು ಆವೊತ್ತು ಕರೆದಿದ್ದಾರೆ. ಈಗ ಅದು ಮೆಟೀರಿಯಲೈಸ್ ಆಗುತ್ತಾ ಇದ್ದು ಸೆಪ್ಟೆಂಬರ್ ಕೊನೆಯೊಳಗಾಗಿ ಫೈನಲೈಸ್ ಆಗುತ್ತದೆ. 400 ಕೇಳಿದ್ದರು, ಈಗ ಅಡಿಶನಲ್ 200 ಮಾಡಬೇಕೆಂದಿದ್ದೇವೆ. ಆಯುರ್ವೇದಕ್ಕೂ ಕೂಡ 75 ಹುದ್ದೆಗಳನ್ನು ಪಿಎಸ್‌ಸಿ ಮೂಲಕ ಮಾಡಿ ಉಳಿದ 102 ಹುದ್ದೆಗಳನ್ನು ಕೂಡ ಮಾಡಬೇಕೆಂದು ಹೇಳಿದ್ದೇವೆ. ನಮಗೆ ಹಣಕಾಸು ಇಲಾಖೆ ಕೂಡ ಅನುಮತಿ ಕೊಟ್ಟಿದ್ದು ಯಾವುದೇ ತಡೆ ಇಲ್ಲ. ಈಗಾಗಲೇ ಅದರ ಪ್ರಕ್ರಿಯೆಗಳು ಪ್ರಾರಂಭವಾಗಿವೆ. ಮಾನ್ಯ ಸದಸ್ಯರುಗಳು ಕೊಟ್ಟ ಸಲಹೆಗಳನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಡಾ : ಎ. ಬಿ. ಮಲಕರೆಡ್ಡಿ :– ಕಾಂಗ್ರೆಸ್ ಬಂದ ಮೇಲೆ 600 ಡಾಕ್ಟರ್ಸ್‌ನ್ನು ಅಪಾಯಿಂಟ್ ಮಾಡಿದೆ. 400 ನರ್ಸ್‌ಸ್‌ನ್ನು ಅಪಾಯಿಂಟ್ ಮಾಡಿದ್ದೇವೆ. ಟೆಕ್ನೀಶಿಯನ್ಸ್ ನೇಮಕ ಮಾಡಲು ಸ್ವಲ್ಪ ತೊಂದರೆ ಬಂತು. ಅಡ್ವರ್ಟೈಸ್‌ಮೆಂಟ್ ಆಗಿತ್ತು. ತಾಂತ್ರಿಕ ತೊಂದರೆಗಳು ಬಂದವು, ಆ ಮೇಲೆ ಸುಪ್ರೀಂಕೋರ್ಟ್‌ನ ವರ್ಡಿಕ್ಟ್ ಕೂಡ ಬಂತು. ರಿಸರ್‌ವೇಶನ್ ಪ್ರಕಾರ ಮಾಡಬೇಕೆಂದು ಬಂತು.

ಉಪಾಧ್ಯಕ್ಷರು :– ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಡುತ್ತಿದ್ದಾರೆ ಅದನ್ನು ಪಾಯಿಂಟ್ ಮಾಡಿ ಇಟ್ಟುಕೊಂಡು ನಂತರ ತಾವು ಉತ್ತರ ಕೊಡಿ.

ಡಾ : ಎ. ಬಿ. ಮಲಕರೆಡ್ಡಿ :– ಅನೇಕ ಸಲಹೆ ಸೂಚನೆಗಳನ್ನು ನಾನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಕೊನೆಯದಾಗಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ. ಯಾವ್ಯಾವ ಹಂತದಲ್ಲಿ ಯಾವ ಸೇವೆಯನ್ನು ಜನರಿಗೆ ಕೊಡಬೇಕು ಆ ಸೇವೆಯನ್ನು ಆಯಾಯ ಮಟ್ಟದಲ್ಲಿ ಕೊಡಬೇಕು. ಉಪ ಕೇಂದ್ರಗಳಲ್ಲಿ ಯಾವ ಸೇವೆಯನ್ನು ಕೊಡಬೇಕು ಆ ಸೇವೆಯನ್ನು ಕೊಡಬೇಕು. ಪ್ರಾಥಮಿಕ ಮಟ್ಟ ಆರೋಗ್ಯ ಕೇಂದ್ರದಲ್ಲಿ ಯಾವ ಸೇವೆಯನ್ನು ಕೊಡಬೇಕು ಆ ಸೇವೆಯನ್ನು ಕೊಡಬೇಕು. ಉಪ ಕೇಂದ್ರದಲ್ಲಿ ಯಾವ ಸೇವೆಯನ್ನು ಕೊಡಬೇಕು ಆ ಸೇವೆಯನ್ನು ಕೊಡಬೇಕು. ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಯಾವ್ಯಾವ ಸೇವೆಯನ್ನು ಕೊಡಬೇಕೋ ಆ ಸೇವೆಯನ್ನು ಕೊಡಬೇಕು. ತಾಲ್ಲೂಕು ಮಟ್ಟದಲ್ಲಿ ಕೇವಲ ಹರ್ನಿಯಾ ಆಪರೇಷನ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಸ್ಟ್ಯಾಮಿನೇಟೆಡ್ ಹರ್ನಿಯಾ ಆಪರೇಷನಾಗಿ ಜಿಲ್ಲಾ ಕೇಂದ್ರದ ಆಸ್ಪತ್ರೆಗೆ ಕಳಿಸಲು ಆಗುವುದಿಲ್ಲ. ಆಗಿಂದಾಗ್ಗೆ ಆಪರೇಷನ್ ಮಾಡಬೇಕಾಗುತ್ತದೆ ಹೆಣ್ಣು ಮಕ್ಕಳಿಗೆ ಡೆಲವರಿಗೆ ತೊಂದರೆಯಾದಾಗ ಸಿಜೇರಿಯನ್ ಮಾಡಬೇಕಾಗುತ್ತದೆ. ಜಿಲ್ಲಾ ಆಸ್ಪತ್ರೆ ಮುಟ್ಟುವುದರಲ್ಲಿ ಆ ಹೆಣ್ಣು ಮಗಳ ಪ್ರಾಣಕ್ಕೆ ಘಾತುಕವಾಗತಕ್ಕಂತಹ ಸಂದರ್ಭ ಬರುತ್ತದೆ ತಾಲ್ಲೂಕು ಆಸ್ಪತ್ರೆಯಲ್ಲೇ ಸಿಜೇರಿಯನ್ ಮಾಡತಕ್ಕಂತಹ ವ್ಯವಸ್ಥೆಯಾಗಬೇಕು. ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಸಿಜೇರಿಯನ್ ಮಾಡತಕ್ಕಂತಹ ಉಪಕರಣಗಳಾದ ನೈಫ್, ಫೋರ್ಸೆಪ್ಸ್

ಇಲ್ಲ. ಅಂತಹ ವ್ಯವಸ್ಥೆಗಳ ಕಡೆ ತಾವು ಲಕ್ಷ್ಯ ಕೊಟ್ಟು ಕೆಲಸ ಮಾಡಿದ್ದೇ ಆದರೆ ತಾವು ಕೂಡ ಸಚಿವರಾಗಿದ್ದಕ್ಕೆ ಸಾರ್ಥಕವಾಗುತ್ತದೆ. ಈ ಸದನದಲ್ಲಿ ಪ್ರತಿಯೊಬ್ಬ ಸದಸ್ಯರು ಕೊಡತಕ್ಕಂತಹ ಸಲಹೆಗಳೇನು ಇವೆ ಅದನ್ನು ಗೌರವ ಪೂರ್ವಕವಾಗಿ ಪರಿಶೀಲಿಸಿ ತಾವು ಪರಿಹಾರ ಒದಗಿಸಿಕೊಡಬೇಕೆಂದು ನಾನು ಮತ್ತೊಂದು ಸಲ ತಮ್ಮಲ್ಲಿ ಕಳಕಳಿಯಿಂದ ವಿನಂತಿಸಿಕೊಳ್ಳುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು :- ಈಗ ಸದನವನ್ನು ಮುಂದೂಡಿ ಮತ್ತೆ 3-00 ಗಂಟೆಗೆ ಸಭೆ ಸಮಾವೇಶಗೊಳ್ಳುವುದು.

(ಸದನವು 1-50 ಕ್ಕೆ ಮುಕ್ತಾಯವಾಗಿ ಮತ್ತೆ 3-00 ಗಂಟೆಗೆ ಸೇರುವುದು)

ಸಭೆಯು ಪುನಃ 3-30ಕ್ಕೆ ಸಮಾವೇಶಗೊಂಡಿತು

(ಪೀಠದಲ್ಲಿ ಉಪಾಧ್ಯಕ್ಷರು ಉಪಸ್ಥಿತರಿದ್ದರು)

ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಪ್ರಾರ್ಥನೆ ಇದೆ, ಮತ್ತು ತುಂಬಾ ದಿನದಿಂದ ಆಸೆ ಇದೆ. ಒಂದು ಬಾರಿ ಪತ್ರಿಕೆಯವರ ಮೂಲಕ ರಾಜ್ಯದ ಜನರಿಗೆ ಪರಿಚಯ ಆಗಬೇಕು. 45 ಜನ ಸಚಿವರು ಒಟ್ಟಿಗೆ ಇದ್ದಂಥ ಒಂದು ದೃಶ್ಯವನ್ನು ನೋಡಬೇಕು ಎಂದು ಏಕೋ ಏನೊ ಒಂದು ಮಹಾದಾಸೆ. ತಾವು ಅದನ್ನು ಯಾವಾಗ ಕಲ್ಪಿಸಿ ಕೊಡುತ್ತೀರಾ? ನಾನು ತಮಾಷೆ ಮಾಡುತ್ತಿಲ್ಲ. ನಾನು ಆ ದೃಶ್ಯವನ್ನು ನೋಡಿ ಆನಂದಪಡಬೇಕು, ಪತ್ರಿಕೆ ಮೂಲಕ ರಾಜ್ಯದ ಜನರಿಗೆ ಗೊತ್ತಾಗಬೇಕು. ಈ ದಿನಾ ನಾಲ್ಕು ಜನರಿದ್ದಾರೆ ಎಂದು ಪತ್ರಿಕೆಯವರು ಬರೆಯುತ್ತಾರೆ....

ಉಪಾಧ್ಯಕ್ಷರು :- ಈಗ 45 ಜನ ಮಂತ್ರಿಗಳು ಒಟ್ಟಿಗೆ ಇರುವುದಕ್ಕಾಗುವುದಿಲ್ಲ, ವಿಧಾನಪರಿಷತ್‌ನಲ್ಲೂ ಕೂಡ ಮಂತ್ರಿಗಳು ಇರಬೇಕಾಗುತ್ತದೆ....

ಶ್ರೀ ಬಿ. ಎಸ್. ಯಡಿಯೂರಪ್ಪ :- ನಾನು ಬೆಳಿಗ್ಗೆ 10-30ಕ್ಕೆ ಆ ದೃಶ್ಯವನ್ನು ಒಟ್ಟಿಗೆ ನೋಡಿಬಿಡೋಣ ಅಂತ. ಇದನ್ನು ನಾನು ಬೇರೆ ರೀತಿಯಲ್ಲಿ ಹೇಳಿದರೂ ಸಹ ಇದು ಖಂಡಿತ ಶೋಭೆ ತರುವುದಿಲ್ಲ. ಉಪಾಧ್ಯಕ್ಷರೇ, ಎಷ್ಟು ಸಾರಿ ನಾವು ಹೇಳುವುದು, ಪರಿಸ್ಥಿತಿ ಹೀಗಿದ್ದರೆ ಬೇಡಿಕೆಗಳ ಮೇಲೆ ಚರ್ಚೆ ಮಾಡುವುದು ಹೇಗೆ? ಅದಕ್ಕೆ ಮಹತ್ವ ಕೊಡುವಂಥದ್ದು, ಅದನ್ನು ಇಂಪ್ಲಿಮೆಂಟ್ ಆಗುವಂಥದ್ದು ಏನಾದರೂ ಸಾಧ್ಯನಾ?